# ಜನಶ್ರೀ ಟೈಮ್ಸ್

ಕನ್ನಡ ದಿನಪತ್ರಿಕೆ

JANASHREE TIMES KANNADA DAILY NEWS PAPER

PRGI NO : KNKAN/26/A0482

ಸಂಪಾದಕರು: ಆನಂದಯ್ಯ ವಿರಕ್ತಮಠ | ಸಂಪುಟ: 01 ಸಂಚಿಕೆ: 44 ಪುಟಗಳು: 04 ಬೆಲೆ: 02 ರೂ. ದಿನಾಂಕ: 12-08-2026 ಬುಧವಾರ | 73536 56555


**ಜನಶ್ರೀವಾಣಿ**

ಜನರಿಂದ ಮತ ಪಡೆದು ಹಿತ ಕಾಯಲಿಲ್ಲ, ಖುರ್ಚಿಗಾಗಿ ಮತದ ಮೌಲ್ಯವನ್ನೇ ಕಳೆವುದೆಂತು ಸರಿ..?

■ ಆನಂದಯ್ಯ ವಿರಕ್ತಮಠ
ಸಂಪಾದಕರು: ಜನಶ್ರೀ ಟೈಮ್ಸ್

## ವಸತಿನಿಲಯ ಪರಿಶೀಲನೆ ; ಎಸಿ, ಕಂಪ್ಯೂಟರ್‌ಗಳು ಸುರಕ್ಷಿತ ಪತ್ತೆ

ಜನಶ್ರೀ ಟೈಮ್ಸ್ ಸುದ್ದಿ

ಗದಗ: ದಿನಾಂಕ 6–8–2026 ರಂದು ಮಾಧ್ಯಮದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯ ಗದಗ ( ಸೂರ್ಯನಗರ)ದಲ್ಲಿ ನಿಲಯದ ಕಂಪ್ಯೂಟರ್ ಹಾಗೂ ಎಸಿಗಳು ಮಾಯವಾಗಿವೆ ಎಂಬ ಶೀರ್ಷಿಕೆಯಡಿ ಸುದ್ದಿ ಪ್ರಕಟವಾಗಿರುತ್ತದೆ.



ಸಮಾಜ ಕಲ್ಯಾಣ ಇಲಾಖೆ ಆಯುಕ್ತರು ನಿಲಯದ ಅಗತ್ಯ ದುರಸ್ಥಿ ಹಾಗೂ ಉನ್ನತೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನ ಬಿಡುಗಡೆ ಮಾಡಿದ್ದರಿಂದ ನಿಲಯದ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ದಿ: 8–8–2026 ರಂದು ಖುದ್ದಾಗಿ ಸಹಾಯಕ ನಿರ್ದೇಶಕರೊಂದಿಗೆ ಸದರಿ ನಿಲಯಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ನಿಲಯದ ಚಾರ್ಜಪಟ್ಟಿಯಲ್ಲಿದ್ದಂತೆ ಸಾಮಗ್ರಿಗಳಾದ ಎಸಿ, ಮಾನಿಟರ್ , ಸಿಪಿಯು , ಟೇಬಲ್ , ಬೆಡ್ ಗಳನ್ನು ಸದರಿ ನಿಲಯದಲ್ಲಿ ಸ್ಥಳಾವಕಾಶ ಇಲ್ಲದ ಕಾರಣ ನಮ್ಮ ಇಲಾಖೆ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ಗಾಂಧಿ ನಗರ, ಗದಗ ಇಲ್ಲಿ ಸ್ಥಳಾಂತರಿಸಿರುವುದು ನಿಜವಿರುತ್ತದೆ . ಮಾಧ್ಯಮದಲ್ಲಿ ಪ್ರಕಟವಾದ ನಿಲಯದ ಕಂಪ್ಯೂಟರ್ ಮತ್ತು ಎಸಿಗಳು ಮಾಯವಾಗಿವೆ ಎಂಬ ಸುದ್ದಿ ಸತ್ಯಾಂಶಕ್ಕೆ ದೂರವಾಗಿರುತ್ತದೆ ಎಂಬ ವಿಷಯ ಭೇಟಿ ನೀಡಿ ಪರಿಶೀಲಿಸಿದ ಸಂದರ್ಭದಲ್ಲಿ ಕಂಡು ಬಂದಿರುತ್ತದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

## ಸರ್ಕಾರಿ ನೌಕರರೊಂದಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಂವಾದ ಅಧಿಕಾರಿಗಳು ಹಾಗೂ ನೌಕರರು ಸರ್ಕಾರದ ಬೆನ್ನೆಲುಬು

# ಜನಸೇವೆಯೇ ಸರ್ಕಾರದ ಮೂಲ ಆಶಯ

ಜನಶ್ರೀ ಟೈಮ್ಸ್ ಸುದ್ದಿ

ಗದಗ : ಸರ್ಕಾರದ ಯಶಸ್ಸಿನಲ್ಲಿ ಮತ್ತು ಸಾರ್ವಜನಿಕ ಸೇವೆಯಲ್ಲಿ ರಾಜ್ಯದ ಪ್ರತಿಯೊಬ್ಬ ಅಧಿಕಾರಿ ಹಾಗೂ ನೌಕರರ ಪಾತ್ರ ಅತ್ಯಂತ ಪ್ರಮುಖವಾಗಿದೆ. ನಾವೆಲ್ಲರೂ ಜನಸಾಮಾನ್ಯರ ಸೇವಕರಾಗಿ ಕಾರ್ಯನಿರ್ವಹಿಸಬೇಕು ಎಂದು ರಾಜ್ಯದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕರೆ ನೀಡಿದರು.

ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಂಟ್ ಹಾಲ್ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಕರ್ನಾಟಕ ಸರ್ಕಾರ ನೌಕರರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ನಾವೆಲ್ಲರೂ ಸರ್ಕಾರದ ಭಾಗವಾಗಿದ್ದು, ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಎನ್ನುವ ಭೇದವಿಲ್ಲದೆ ಜನರ ಏಳಿಗೆಗಾಗಿ ಶ್ರಮಿಸಬೇಕು. ಅಧಿಕಾರಿಗಳ ಜವಾಬ್ದಾರಿ ಕೇವಲ ಆಡಳಿತಕ್ಕೆ ಸೀಮಿತವಾಗಿರದೆ, ಜನರ ಸಮಸ್ಯೆಗಳಿಗೆ ಸ್ಪಂದಿಸುವುದಾಗಿದೆ ಎಂದು ತಿಳಿಸಿದರು.

ಈ ನಾಡನ್ನು ಮುನ್ನಡೆಸಿದ ಕೆಂಗಲ್ ಹನುಮಂತಯ್ಯ, ಎಸ್.ಎಂ. ಕೃಷ್ಣ, ಸಿದ್ದರಾಮಯ್ಯ ಸೇರಿದಂತೆ ಅನೇಕ ಮಾಜಿ ಮುಖ್ಯಮಂತ್ರಿಗಳ ಕೊಡುಗೆಯನ್ನು ಈ ಸಂದರ್ಭದಲ್ಲಿ ಸ್ಮರಿಸಿದ ಅವರು, ವಿಧಾನಸೌಧವು ನಾಡಿನ ಪ್ರಜಾಸತ್ತಾತ್ಮಕ ಮೌಲ್ಯಗಳ ಸಂಕೇತವಾಗಿದೆ ಎಂದು ಪ್ರತಿಪಾದಿಸಿದರು.

**ಜನಸೇವೆಗೆ ಆದ್ಯತೆ:**

ರಾಜ್ಯದ ಸುಮಾರು 7 ಕೋಟಿ ಜನಸಂಖ್ಯೆಯಲ್ಲಿ ಅತ್ಯಲ್ಪ ಸಂಖ್ಯೆಯ ನೌಕರರು ಹಾಗೂ ಅಧಿಕಾರಿಗಳಿಗೆ ಸಾರ್ವಜನಿಕ ಸೇವೆ ಮಾಡುವ ಅವಕಾಶ



ಸಿಕ್ಕಿದೆ. ಈ ಅವಕಾಶವನ್ನು ಸದ್ಬಳಕೆ ಮಾಡಿಕೊಂಡು ದಕ್ಷತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಕಿವಿಮಾತು ಹೇಳಿದರು. ಇತಿಹಾಸ ಸೃಷ್ಟಿಸುವತ್ತ ಹೆಜ್ಜೆ: ಪ್ರಜಾಪ್ರಭುತ್ವದ ಮುಖ್ಯ ಅಂಗಗಳಾದ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮತ್ತು ಪತ್ರಿಕಾರಂಗಗಳು ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ ರಾಜ್ಯದ ಪ್ರಗತಿ ಸಾಧ್ಯ. ಹಾಗಾಗಿ, ಇತಿಹಾಸವನ್ನು ಓದುವುದಕ್ಕಿಂತ ಅಥವಾ ಬರೆಯುವುದಕ್ಕಿಂತ ಹೊಸ ಇತಿಹಾಸವನ್ನು ಸೃಷ್ಟಿಸುವುದು ಮುಖ್ಯ. ನಮ್ಮ ಕೆಲಸಗಳು ಶಾಶ್ವತವಾಗಿ ಉಳಿಯುವಂತೆ ಆಡಳಿತ ನಡೆಸಬೇಕು ಎಂದು ಅಭಿಪ್ರಾಯಪಟ್ಟರು.

ತಾಲೂಕು ಮಟ್ಟದಲ್ಲಿಯೇ ವಾಸ, ಜನರ ಸಮಸ್ಯೆಗಳಿಗೆ ನೇರ ಸ್ಪಂದನೆ: ಸಾರ್ವಜನಿಕರ ಅರ್ಜಿಗಳು ಮತ್ತು ಕುಂದುಕೊರತೆಗಳು ಅನಗತ್ಯವಾಗಿ ಜಿಲ್ಲಾ ಅಥವಾ ರಾಜ್ಯ ಮಟ್ಟಕ್ಕೆ ತಲುಪಬಾರದು. ತಾಲೂಕು ಹಾಗೂ ಸ್ಥಳೀಯ ಮಟ್ಟದಲ್ಲೇ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು. ತಾಲೂಕು ಮಟ್ಟದ ಅಧಿಕಾರಿಗಳು, ಕಂದಾಯ ನಿರೀಕ್ಷಕರು, ಗ್ರಾಮ ಆಡಳಿತಾಧಿಕಾರಿಗಳು ಸೇರಿದಂತೆ ಸರ್ವ ಅಧಿಕಾರಿಗಳು ತಮ್ಮ ನಿಯೋಜಿತ ಕೇಂದ್ರ ಸ್ಥಾನದಲ್ಲೇ ವಾಸವಿರಬೇಕು. ಅಧಿಕಾರಿಗಳು ಕಚೇರಿಯಲ್ಲಿ ಕಡ್ಡಾಯವಾಗಿ ಲಭ್ಯವಿದ್ದು, ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಬೇಕು ಎಂದು ಸೂಚಿಸಿದರು.

**ಮನೆ ಬಾಗಿಲಿಗೆ ಖಾತಾ ತಲುಪಿಸುವ ಗುರಿ:**

ಗ್ರಾಮೀಣ ಪ್ರದೇಶದ ಸುಮಾರು 1 ಕೋಟಿ 11 ಲಕ್ಷ ಕುಟುಂಬಗಳಿಗೆ ಹಾಗೂ ನಗರ ಪ್ರದೇಶದ 25 ಲಕ್ಷ ಮನೆಗಳಿಗೆ ಯಾವುದೇ ಲಂಚದ ಹಂಗಿಲ್ಲದೆ, ಉಚಿತವಾಗಿ ಫೋಟೋ ಹಾಗೂ ಸಹಿ ಸಹಿತ ಖಾತಾ/ಪ್ರಮಾಣಪತ್ರಗಳನ್ನು ನೀಡುವ ಐತಿಹಾಸಿಕ ತೀರ್ಮಾನ ಕೈಗೊಳ್ಳಲಾಗಿದೆ. ಮುಂದಿನ 5 ರಿಂದ 6 ತಿಂಗಳ ಅವಧಿಯಲ್ಲಿ ರಾಜ್ಯದ ಎಲ್ಲಾ ಪಂಚಾಯಿತಿ ಹಾಗೂ ಹೋಬಳಿಗಳಲ್ಲಿ ಈ ಪ್ರಮಾಣಪತ್ರಗಳನ್ನು ತಲುಪಿಸುವ ಕೆಲಸ ಪೂರ್ಣಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

**ಕರ್ನಾಟಕ ಮಾದರಿ:**

ರಾಜ್ಯ ಸರ್ಕಾರದ ಸಾಮಾಜಿಕ ಭದ್ರತಾ ಯೋಜನೆಗಳು ಮತ್ತು ಗ್ಯಾರಂಟಿಗಳನ್ನು ಇಂದು ದೇಶದ ಇತರ ರಾಜ್ಯಗಳೂ ಅನುಸರಿಸುತ್ತಿದ್ದು, ಕರ್ನಾಟಕ ಮಾದರಿ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿದೆ. ಅಧಿಕಾರ ಎಂಬುದು ಕೇವಲ ಶಕ್ತಿಯ ಸಂಕೇತವಲ್ಲ, ಅದೊಂದು ಸಾರ್ವಜನಿಕ ಜವಾಬ್ದಾರಿ. ಬಸವಣ್ಣನವರ ಮಾರ್ಗದರ್ಶನದಂತೆ "ಜನಸೇವೆಯೇ ಜನಾರ್ದನ ಸೇವೆ" ಎಂಬ ತತ್ವದಡಿಯಲ್ಲಿ ಪ್ರತಿಯೊಬ್ಬರೂ ಕಾರ್ಯನಿರ್ವಹಿಸಬೇಕು ಎಂದು ಕರೆ ನೀಡಿದರು.

ಅಧಿಕಾರಿಗಳು ಚೌಕಟ್ಟಿನೊಳಗೆ ನಿಂತು ಕಾನೂನುಬದ್ಧವಾಗಿ ಜನರಿಗೆ ಸಹಾಯ ಮಾಡುವ ಮನೋಭಾವ ಬೆಳೆಸಿಕೊಳ್ಳಬೇಕು. ಕಚೇರಿಗಳಿಗೆ ಬರುವ ಸಾರ್ವಜನಿಕರನ್ನು ಗೌರವದಿಂದ ಕಾಣಬೇಕು ಹಾಗೂ ಅವರ ಅಳಲನ್ನು ಆಲಿಸಿ ಸ್ಪಂದಿಸಬೇಕು. ತಂತ್ರಜ್ಞಾನವನ್ನು ಗರಿಷ್ಠ ಮಟ್ಟದಲ್ಲಿ ಬಳಸಿಕೊಂಡು, ಆಡಳಿತದಲ್ಲಿ ಭ್ರಷ್ಟಾಚಾರಕ್ಕೆ ಆಸ್ಪದವಿಲ್ಲದಂತೆ ಪಾರದರ್ಶಕತೆ ತರಬೇಕು. ಜನರು ನೀಡಿರುವ ಅವಕಾಶವನ್ನು ಸರಿಯಾಗಿ ಬಳಸಿಕೊಂಡು,

4ನೇ ಪುಟಕ್ಕೆ....

**ಶಿಷ್ಟಾಚಾರಕ್ಕೆ ಆದ್ಯತೆ, ಅಚ್ಚುಕಟ್ಟಾದ ವೇದಿಕೆ ಆಕರ್ಷಕ ಪಥಸಂಚಲನಕ್ಕೆ ಸಿದ್ಧತೆ ಶಾಲಾ ಮಕ್ಕಳ ಸುರಕ್ಷಿತ ಆಗಮನ ಮರಳುವಿಕೆ ಕುರಿತು ವಿಶೇಷ ಚರ್ಚೆ**

## ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸ್ವಾತಂತ್ರ್ಯೋತ್ಸವದ ಪೂರ್ವಸಿದ್ಧತಾ ಸಭೆ

ಜನಶ್ರೀ ಟೈಮ್ಸ್ ಸುದ್ದಿ

ಗದಗ: ಜಿಲ್ಲಾ ಮಟ್ಟದಲ್ಲಿ ಆಗಸ್ಟ್ 15ರಂದು ಆಚ–ರಿಸಲಾಗುವ ಸ್ವಾತಂತ್ರ್ಯೋತ್ಸವವನ್ನು ಅರ್ಥ–ಪೂರ್ಣವಾಗಿ, ಶಿಸ್ತುಬದ್ಧವಾಗಿ ಹಾಗೂ ವಿಜೃಂಭಣೆಯಿಂದ ಆಚರಿಸುವ ಸಂಬಂಧ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸೋಮವಾರ ಜಿಲ್ಲಾಡಳಿತ ಭವನದಲ್ಲಿ ಪೂರ್ವಸಿದ್ಧತಾ ಸಭೆ ಜರುಗಿತು.

ರಾಷ್ಟ್ರೀಯ ಹಬ್ಬವಾದ ಸ್ವಾತಂತ್ರ್ಯೋತ್ಸವ ಆಚರಣೆಯಲ್ಲಿ ಶಿಷ್ಟಾಚಾರ ಪಾಲನೆಗೆ ಹೆಚ್ಚಿನ ಆದ–್ಯತೆ ನೀಡಬೇಕು. ಕಾರ್ಯಕ್ರಮದ ಪ್ರತಿಯೊಂದು ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಮುಖ್ಯ ಸಮಾರಂಭಕ್ಕೆ ಗಣ್ಯರು, ಜನಪ್ರತಿನಿಧಿಗಳು ಹಾಗೂ ಅತಿಥಿಗಳನ್ನು ಆಹ್ವಾನಿಸುವ ಪ್ರಕ್ರಿಯೆಯಲ್ಲಿ ಸೂಕ್ತ ನಿಗಾ ವಹಿಸಬೇಕು. ಆಮಂತ್ರಣ ಪತ್ರಿಕೆಗಳನ್ನು ಶಿಷ್ಟಾಚಾರದ ನಿಯಮಾನುಸಾರ ಸಕಾಲದಲ್ಲಿ ತಲುಪಿಸುವುದರೊಂದಿಗೆ ಅತಿಥಿಗಳ ಆಸನ ವ್ಯವಸ್ಥೆ ಸೇರಿದಂತೆ ಅಗತ್ಯ ಸಿದ್ಧತೆಗಳನ್ನು ವ್ಯವಸ್ಥಿತವಾಗಿ ಕೈಗೊಳ್ಳಬೇಕು ಎಂದು ತಿಳಿಸಿದರು.

ಕೆ ಎಚ್ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುವ ಮುಖ್ಯ ಸಮಾರಂಭದ ವೇದಿಕೆ ಅಲಂಕಾರವನ್ನು ಅಚ್ಚುಕಟ್ಟಾಗಿ ಹಾಗೂ



ಆಕರ್ಷಕವಾಗಿ ಕೈಗೊಳ್ಳಬೇಕು. ರಾಷ್ಟ್ರೀಯ ಹಬ್ಬದ ಘನತೆಗೆ ತಕ್ಕಂತೆ ವೇದಿಕೆ ಸಿದ್ಧಪಡಿಸುವುದರೊಂದಿಗೆ ಕ್ರೀಡಾಂಗಣದಲ್ಲಿ ಸಾರ್ವಜನಿಕರು, ವಿದ್ಯಾರ್ಥಿಗಳು ಹಾಗೂ ಆಹ್ವಾನಿತ ಅತಿಥಿಗಳಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಸೂಚಿಸಿದರು. ಶಾಲಾ ಮಕ್ಕಳ ಸುರಕ್ಷತೆಗೆ ಆದ್ಯತೆ : ಸ್ವಾತಂತ್ರ್ಯೋತ್ಸವ ಸಮಾರಂಭಕ್ಕೆ ಶಾಲಾ ಮಕ್ಕಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕರೆತರುವ ಕುರಿತು ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಯಿತು. ವಿವಿಧ ಶಾಲೆಗಳಿಂದ ವಿದ್ಯಾರ್ಥಿಗಳನ್ನು ಜಿಲ್ಲಾ ಕ್ರೀಡಾಂಗಣಕ್ಕೆ ಸುರಕ್ಷಿತವಾಗಿ ಕರೆತಂದು, ಕಾರ್ಯಕ್ರಮ ಮುಕ್ತಾಯದ ನಂತರ ಯಾವುದೇ ತೊಂದರೆಯಾಗದಂತೆ ಅವರನ್ನು ಸುರಕ್ಷಿತವಾಗಿ ಮರಳಿ ಕಳುಹಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಲಾಯಿತು.

ವಿದ್ಯಾರ್ಥಿಗಳ ಆಗಮನ ಮತ್ತು ನಿರ್ಗಮನ ಸಂದರ್ಭದಲ್ಲಿ ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಇತರೆ ಸಂಬಂಧಿಸಿದ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಮಕ್ಕಳ ಸುರಕ್ಷತೆಗೆ ಮೊದಲ ಆದ್ಯತೆ ನೀಡಿ ಸಾರಿಗೆ, ಕುಡಿಯುವ ನೀರು ಹಾಗೂ ಅಗತ್ಯ ಮೂಲಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸುವಂತೆ ಸೂಚಿಸಲಾಯಿತು. ಜಿಲ್ಲಾ ಕ್ರೀಡಾಂಗಣದ ಸಂಪೂರ್ಣ ಸ್ವಚ್ಛತೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಕಾರ್ಯಕ್ರಮಕ್ಕೂ ಮುನ್ನ ಕ್ರೀಡಾಂಗಣದ ಒಳ ಹಾಗೂ ಹೊರ ಆವರಣವನ್ನು ಸ್ವಚ್ಛಗೊಳಿಸುವುದರೊಂದಿಗೆ, ಸಾರ್ವಜನಿಕರ ಅನುಕೂಲಕ್ಕಾಗಿ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಬೇಕು. ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಕ್ರೀಡಾಂಗಣ ಸಂಪೂರ್ಣ ಭರ್ತಿಯಾಗುವಂತೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಆಕರ್ಷಕ ಪಥಸಂಚಲನಕ್ಕೆ ಸಿದ್ಧತೆ : ಮುಖ್ಯ ಸಮಾರಂಭದ ಪ್ರಮುಖ ಆಕರ್ಷಣೆಯಾದ ಪಥಸಂಚಲನವನ್ನು ಶಿಸ್ತುಬದ್ಧವಾಗಿ ಹಾಗೂ ಆಕರ್ಷಕವಾಗಿ ಆಯೋಜಿಸಲು ಅಗತ್ಯ ಪೂರ್ವಸಿದ್ಧತೆ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು. ಪಥಸಂಚಲನದಲ್ಲಿ ಪೊಲೀಸ್ ಇಲಾಖೆ, ಎನ್‌ಸಿಸಿ, ಎನ್‌ಎಸ್‌ಎಸ್, ಸ್ಕೌಟ್ಸ್ ಮತ್ತು ಗೈಡ್ಸ್, ಸೇವಾದಳ ಹಾಗೂ ಶಾಲಾ ಮಕ್ಕಳು ಪಾಲ್ಗೊಳ್ಳಲಿದ್ದು, ಎಲ್ಲಾ ತಂಡಗಳು ಸೂಕ್ತ ಪೂರ್ವಾಭ್ಯಾಸ ನಡೆಸಬೇಕು. ಪಥಸಂಚಲನವು ಕ್ರಮಬದ್ಧವಾಗಿ ಹಾಗೂ ರಾಷ್ಟ್ರೀಯ ಹಬ್ಬದ ಘನತೆಗೆ ತಕ್ಕಂತೆ ನಡೆಯುವಂತೆ ಸಂಬಂಧಿಸಿದ ಇಲಾಖೆಗಳು ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ತಿಳಿಸಿದರು.

ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕ–ರಿಗೆ ಸನ್ಮಾನ ಕಾರ್ಯಕ್ರಮ ಆಯೋಜಿಸುವ ಕು–ರಿತು ಸಹ ಸಭೆಯಲ್ಲಿ ಚರ್ಚಿಸಲಾಯಿತು. ಸನ್ಮಾನ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಲು ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಸೂಚಿಸಲಾಯಿತು. ಸಚಿವರ ಸ್ವಾತಂತ್ರ್ಯೋತ್ಸವ.

4ನೇ ಪುಟಕ್ಕೆ....

## ಎಸ್‌ಐಆರ್ : 10,41,036 ಗಣತಿ ನಮೂನೆಗಳ ಡಿಜಿಟಲೀಕರಣ

ಜನಶ್ರೀ ಟೈಮ್ಸ್ ಸುದ್ದಿ

ಕೊಪ್ಪಳ: ಕೊಪ್ಪಳ ಜಿಲ್ಲೆಯಲ್ಲಿ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ–2026 ಕಾರ್ಯ ಪ್ರಗತಿಯಲ್ಲಿದ್ದು, ಜೂನ್ 30 ರಿಂದ ಆಗಸ್ಟ್ 11 ರ ಸಂಜೆ 06 ಗಂಟೆಯವರೆಗೆ ಒಟ್ಟು 10,41,012 ಗಣತಿ ನಮೂನೆಗಳ ಡಿಜಿಟಲೀಕರಣ ಕಾರ್ಯ ಪೂರ್ಣಗೊಂಡಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಅವರು ತಿಳಿಸಿದ್ದಾರೆ.



ಕೊಪ್ಪಳ ಜಿಲ್ಲೆಯ 5 ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಒಟ್ಟು 11,90,214 ಮತದಾರರಿದ್ದು, ಈ ಎಲ್ಲಾ ಮತದಾರರ ಮುದ್ರಿತವಾಗಿರುವ ಗಣತಿ ನಮೂನೆಗಳನ್ನು ಈಗಾಗಲೇ ಸಂಬಂಧಪಟ್ಟ ಬೂತ್ ಮಟ್ಟದ ಅಧಿಕಾರಿಗಳಿಂದ ವಿತರಿಸಲಾಗಿದೆ. ಇಲ್ಲಿವರೆಗೆ ಒಟ್ಟು 10,41,012 ಗಣತಿ ನಮೂನೆಗಳನ್ನು ಡಿಜಿಟಲೀಕರಣ ಮಾಡಲಾಗಿರುತ್ತದೆ ಎಂದು ಅವರು ತಿಳಿಸಿದ್ದಾರೆ.


**ಜನಶ್ರೀ ಟೈಮ್ಸ್**

**ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.**


## ಜಲ ಮೂಲಗಳ ಪುನಶ್ಚೇತನಕ್ಕೆ ವಿಬಿಜಿ ರಾಮ್‌ಜಿ ಬಲ



ಜನಶ್ರೀ ಟೈಮ್ಸ್ ಸುದ್ದಿ

ಗದಗ: ಕೂಲಿ ಕಾರ್ಮಿಕರ ವಲಸೆ ತಡೆಗಟ್ಟುವುದು, ಗ್ರಾಮೀಣ ಭಾಗದ ಸಂಪನ್ಮೂಲ ಸಂರಕ್ಷಣೆ, ಮಣ್ಣು ಮತ್ತು ನೀರು ಸಂರಕ್ಷಣೆ, ಜಲ ಮೂಲಗಳ ಸಂರಕ್ಷಣೆ ಜತೆಗೆ ದುಡಿಮೆಗೆ ವಿಬಿಜಿ ರಾಮ್ ಜಿ ಯೋಜನೆ ಪೂರಕವಾಗಿದೆ ಎಂದು ತಾಪಂ ಸಹಾಯಕ ನಿರ್ದೇಶಕರು (ವಿಬಿಜಿ ರಾಮ್‌ಜಿ) ಕುಮಾರ ಪೂಜಾರ ಹೇಳಿದರು.

ಗದಗ ತಾಲೂಕಿನ ಅಂತೂರ ಗ್ರಾಮದಲ್ಲಿಯ ವಿಬಿಜಿ ರಾಮ್‌ಜಿ ಯೋಜನೆಯಡಿ ಕೆರೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು. ವಿಬಿಜಿ ರಾಮ್‌ಜಿ ಯೋಜನೆ ಅಡಿ ಕೂಲಿ ಮೊತ್ತ ರೂ. 382 ರೂ.ಗೆ ಹೆಚ್ಚಳವಾಗಿದೆ. ಎನ್‌ಎಂಎಸ್–ಎಸ್ ತಂತ್ರಾಂಶದ ಮೂಲಕ ಎರಡು ಬಾರಿ ಹಾಜರಾತಿ, ಅಳತೆಗೆ ಅನುಸಾರ ಕೂಲಿ ಪಾವತಿ ಮಾಡಲಾಗುತ್ತದೆ. ಕೂಲಿ ಪಾವತಿಯಲ್ಲಿ ಗಂಡು– ಹೆಣ್ಣು ಎಂಬ ವ್ಯತ್ಯಾಸವಿಲ್ಲದೆ ವೇತನ ನೀಡಲಾಗುತ್ತದೆ. ಗ್ರಾಮಸ್ಥರು ಇದರ ಸದಪಯೋಗ ಪಡೆದುಕೊಳ್ಳುವಂತೆ ತಿಳಿಸಿದರು. ಸಹಾಯಕ ನಿರ್ದೇಶಕರು (ಪಂರಾ) ಶಿವಕುಮಾರ ವಾಲಿ ಅವರು ಮಾತನಾಡಿ, ವಿಬಿಜಿ ರಾಮ್‌ಜಿ ಯೋಜನೆ ಗ್ರಾಮೀಣ ಪ್ರದೇಶದ ಬಡ ಅಕುಶಲ ಕೂಲಿ ಕಾರ್ಮಿಕರಿಗೆ ಸ್ಥಳೀಯವಾಗಿಯೇ ಉದ್ಯೋಗ ಒದಗಿಸಲಾಗುತ್ತಿದೆ ಎಂದರು. ಗ್ರಾಮೀಣ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿದೆ. ಎನ್‌ಎಂಎಂಎಸ್ ತಂತ್ರಾಂಶದಲ್ಲಿ ಪ್ರತಿದಿನ.

3ನೇ ಪುಟಕ್ಕೆ....

## ಶ್ರೀ ದ್ಯಾಮವ್ವ ಹಾಗೂ ಶ್ರೀ ದುರ್ಗಮ್ಮ ದೇವತೆಯರ ಹರಿ ಜಾತ್ರೋತ್ಸವ : ಕೊಟ್ರಪ್ಪ ಕಮತರ

ಜನಶ್ರೀ ಟೈಮ್ಸ್ ಸುದ್ದಿ

ಗದಗ: ಪ್ರತಿ 12 ವರ್ಷಕ್ಕೊಮ್ಮೆಜರುಗುವ ಐತಿಹಾಸಿಕ ಗದಗ– ಬೆಟಗೇರಿಯ ಗ್ರಾಮ ದೇವತೆಯರಾದಶ್ರೀ ದ್ಯಾಮವ್ವ ಮತ್ತು ದುರ್ಗಮ್ಮದೇವಿಯರ ಹ–ರಿಜಾತ್ರೋತ್ಸವ ಇದೆಆಗಸ್ಟ್ 18 ರಿಂದ 28ರ ವರೆಗೆ ಜರುಗಲಿದೆಎಂದು ವೀರಭದ್ರೇಶ್ವರ ಮತ್ತುದ್ಯಾಮವ್ವ, ದುರ್ಗಮ್ಮ ದೇವಸ್ಥಾನ ಟ್ರಸ್ಟ್ ಕಮೀಟಿ ಅಧ್ಯಕ್ಷರಾದ ಕೊಟ್ರಪ್ಪ ಕಮತರ ಅವರು ಹೇಳಿದರು.

ನಗರದ ಒಕ್ಕಲಗೇರಿಯಓಣಿಯಲ್ಲಿರುವ ಶ್ರೀ ದ್ಯಾಮವ್ವಕಟ್ಟಿಯ ದೇವಸ್ಥಾನದ ಆವರಣದಲ್ಲಿಸೋಮವಾರ ಕರೆದಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಗ್ರಾಮದೇವತೆ ಯರಾದ ಶ್ರೀ ದ್ಯಾಮವ್ವ ಮತ್ತು ಶ್ರೀ ದುರ್ಗಮ್ಮ ದೇವಿಯರಹರಿ ಜಾತ್ರಾ ಮಹೋತ್ಸವಮಾಡುವುದನ್ನು ಗದಗ–ಬೆಟಗೇ–ರಿಗ್ರಾಮದ ಶ್ರೀದೇವಿಯ ಭಕ್ತರುನಿರ್ಣಯಿಸಿದ್ದಾರೆ ಎಂದು ಹೇಳಿದರು. ಟ್ರಸ್ಟ್ ಕಮಿಟಿಯ ಸದಸ್ಯರಾದ ಎಂ. ಎಂ.ಹಿರೇಮಠ ಅವರು ಮಾತನಾಡಿ, ಅಗಸ್ಟ್18ರಂದು ಒಕ್ಕಲಗೇರಿ ಓಣಿಯಲ್ಲಿರುವ ಶ್ರೀ ದ್ಯಾಮವ್ವ ಮತ್ತು ದುರ್ಗಮ್ಮದೇವಿಯ ಮೂರ್ತಿಗಳ ಪ್ರತಿಷ್ಠಾಪನೆ ಜರುಗುವುದು ಮತ್ತು ಆಗಸ್ಟ್ 18ರಿಂದ25ರ ವರೆಗೆ ಪ್ರತಿದಿನ ಸಾಯಂಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತವೆ ಎಂದು ಹೇಳಿದರು. ಅಗಸ್ಟ್ 24ರಂದು ಮಧ್ಯಾಹ್ನ 1 ಗಂಟೆಗೆ ಒಕ್ಕಲಗೇರಿ ಓಣಿಯಲ್ಲಿ ಮಹಾಅನ್ನಸಂತರ್ಪಣೆ ಕಾರ್ಯಕ್ರಮಜರುಗುವುದು. 25ರಂದುಮುತ್ತೈದೆಯ–ರಿಗೆ ಉಡಿ ತುಂಬಾ ಕಾರ್ಯಕ್ರಮ ಹಾಗೂ ನಗರದಲ್ಲಿರುವ ದೇವಸ್ಥಾನಗಳಿಗೆ ಉಡಿತುಂಬುವ ಹಾಗೂ ಕಾಯಿ ಒಡಿಸುವ ಕಾರ್ಯಕ್ರಮ ಜರಗುವುದು. ಅಗಸ್ಟ್ 26ರಂದು ಬೆಳಿಗ್ಗೆ 11 ಗಂಟೆಗೆ ಶ್ರೀದ್ಯಾಮವ್ವ ಮತ್ತು ದುರ್ಗಮ್ಮದೇವಿಯನ್ನು



ಸಕಲಮಂಗಲ ವಾದ್ಯವೈಭವಗಳೊಂದಿಗೆ ಒಕ್ಕಲಗೇರಿ ಓಣಿಯ ಶ್ರೀ ದ್ಯಾಮವ್ವ ದೇವಸ್ಥಾನದಿಂದಜೋಡು ಮಾರುತಿ ದೇವಸ್ಥಾನದಹತ್ತಿರದ ಕಿಲ್ಲಾ ಓಣಿಯಲ್ಲಿರುವದುರ್ಗಮ್ಮನ ಗುಡಿಯಲ್ಲಿಮೂರ್ತಿಗಳ ಪ್ರತಿಷ್ಠಾಪನೆ ಮಾಡಲಾಗುವದು. ಆಗಷ್ಟ 27 ರಂದು ಸನ್ಮಾನ ಕಾರ್ಯಕ್ರಮ ಜರುಗುವದು. ಆಗಷ್ಟ 28ರಂದು ಶ್ರೀದ್ಯಾಮವ್ವ ಹಾಗೂ ದುರ್ಗಮ್ಮ ದೇವರಗುಡಿಯಲ್ಲಿ ಬೆಳಿಗ್ಗೆ 7 ಗಂಟೆಗೆ ಹೋಮಹವನ ಹಾಗೂ ಮಧ್ಯಾಹ್ನ ಮಹಾಅನ್ನಸಂತರ್ಪಣೆ ಕಾರ್ಯಕ್ರಮಜರುಗುವುದು ಎಂದು ಹೇಳಿದರು.

ಕಾರ್ಯಾಧ್ಯಕ್ಷರಾದ ಫಕೀರಪ್ಪ ಹೆಬಸೂರ ಅವರು ಮಾತನಾಡಿ, ಒಕ್ಕಲಗೇರಿಯಲ್ಲಿ 1820 ರಲ್ಲಿಸ್ಥಾಪನೆಯಾದ ದ್ಯಾಮವ್ವ ದೇವತೆಯದೇವಸ್ಥಾನ ಐತಿಹಾಸಿಕ ಹಿನ್ನೆಲೆ ಹೊಂದಿದೆ.ಇದು ಪೂರ್ವ ಗದುಗಿನ ಗ್ರಾಮದೇವತೆಯಾಗಿದ್ದು ಪ್ರತಿ 12 ವರ್ಷಕ್ಕೊಮ್ಮೆ ಜರುಗುವ ಈಜಾತ್ರೆಯನ್ನು ಈ ಹಿಂದೆಕೊರೋನಾದಿಂದಾಗಿ ಜಾತ್ರೆಯನ್ನು ಮುಂದೂಡಲಾಗಿತ್ತು ಈಗ 18 ವರ್ಷಕ್ಕೆಆಚರಣೆ ಮಾಡಲಾಗುತ್ತಿದ್ದು, ಈ ಬಾರಿವಿಜೃಂಭಣೆಯಿಂದ ಜಾತ್ಯಾತೀತವಾಗಿ ಎಲ್ಲರೂಕೂಡಿಕೊಂಡು ಆಚ–ರಿಸಲಾಗುತ್ತದೆ. ಈ ಜಾತ್ರೆಗೆ ಎಲ್ಲರೂ ಉತ್ತಮವಾಗಿ ಸಹಕಾರನೀಡಿದ್ದಾರೆ ಎಂದು ಹೇಳಿದರು.

ಕೋಶಾಧ್ಯಕ್ಷರಾದ ವಿಜಯಕುಮಾರ ಗಡ್ಡಿ ಅವರು ಮಾತನಾಡಿ, 75 ವರ್ಷದಇತಿಹಾಸ ಹೊಂದಿರುವ ಶ್ರೀ ದ್ಯಾಮವ್ವ,ದುರ್ಗವ್ವ ದೇವತೆಯರು ಭಕ್ತ–ರಿಗೆಬೇಡಿದ ವರವನ್ನು ನೀಡುವಜಗನ್ಮಾತೆಯಾಗಿದ್ದಾರೆ. ಹರಿಜಾತ್ರೆಯನ್ನು ಅದ್ದೂರಿಯಾಗಿ ಆಚರಿಸಲ ಈಗಾಗಲೇ 66 ಸಮಾಜಗಳಹಿರಿಯರನ್ನು ಕರೆದು ಸಭೆ ನಡೆಸಿಅಚ್ಚುಕಟ್ಟಾಗಿ ನಿರ್ವಹಿಸಲು ಸಕಲ ಸಿದ್ಧತೆಮಾಡಿಕೊಳ್ಳಲಾಗಿದೆ ಎಂದು ಹೇಳಿದರು. ಸಂಘಟನ ಕಾರ್ಯದರ್ಶಿ ರಾಜುಖಾನಪ್ಪನವರು ಮಾತನಾಡಿ, ಐತಿಹಾಸಿಕಹರಿಜಾತ್ರೆಗೆ ಇಲ್ಲಿಂದ ಮದುವೆಯಾಗಿಹೋದ ಎಲ್ಲ ಹೆಣ್ಣು ಮಕ್ಕಳು ಜಾತ್ರೆಗೆಬಂದು ಉಡಿ ತುಂಬಿಕೊಂಡುಶ್ರೀದೇವಿಯರ ದರ್ಶನ ಆಶೀರ್ವಾದಪಡೆಯಲಿದ್ದಾರೆ. ಈ ಬಾರಿ ಫಕೀರಸಾಬಾಂಡಗೆ ಅವರು ಒಂದು ಕೆಜಿ ಬೆಳ್ಳಿಯಲ್ಲಿದ್ಯಾಮವ್ವ ದುರ್ಗಮ್ಮ ದೇವತೆಗಳಿಗೆ ಕಿರೀಟವನ್ನು ತಯಾರಿಸಿ ನೀಡಿದ್ದಾರೆ ಎಂದುಹೇಳಿದರು.

ಹರಿಜಾತ್ರೆಯ ಉಪಾಧ್ಯಕ್ಷರಾದ ಆನಂದಸರ್ವದೆ ಅವರು ಮಾತನಾಡಿ, ಆಗಸ್ಟ್ 26 ರಂದು ಶ್ರೀ ದ್ಯಾಮವ್ವ ಮತ್ತು ದುರ್ಗಮ್ಮ ದೇವತೆಯರನ್ನು ಅದ್ದೂರಿಯಾಗಿ ಮಂಗಲವಾದ್ಯಗಳೊಂದಿಗೆ ಕಿಲ್ಲಾ ಓಣಿಯಲ್ಲಿ ಬರಮಾಡಿಕೊಳ್ಳಲಾಗುವುದು. ಅಂದು ರಾತ್ರಿ ಮಹಾ ಅನ್ನಸಂತರ್ಪಣೆ ಕಾರ್ಯಕ್ರಮ ಜರಗುವುದು ಜೊತೆಗೆ ಪ್ರತಿದಿನವೂ ಮನರಂಜನೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುವವು ಎಂದು ಹೇಳಿದರು. ಸುಧೀರ ಕಾಟೀಗರ ಮಾತನಾಡಿ, ಗದುಗಿನ ಈ ಶ್ರೀ ದುರ್ಗಮ್ಮ ಮತ್ತು ದ್ಯಾಮಮ್ಮ ದೇವತೆಯರ ಹರಿ ಜಾತ್ರೆಯ ವೈಭವವನ್ನು ಕಣ್ತುಂಬಿಕೊಳ್ಳಲು ಗದುಗಿನ ಜನತೆ ಕಾತರರಾಗಿದ್ದಾರೆ ಪ್ರತಿದಿನವೂ ನಡೆಯಲಿರುವ ಕಾರ್ಯಕ್ರಮಗಳಲ್ಲಿ ಎಲ್ಲರೂ ಪಾಲ್ಗೊಂಡು ಜಾತ್ರೆಯನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ಈ ಪತ್ರಿಕಾಗೋಷ್ಠಿಯಲ್ಲಿ ನಿಂಗಪ್ಪ ಪಡಗದ, ರಾಮಣ್ಣ ಫಲದೊಡ್ಡಿ, ಮು–ರಿಗೆಪ್ಪ ನಾಲ್ವಾಡ, ಗಂಗಾಧರ ಮೇಲಗಿರಿ, ನರಸಪ್ಪ ತುಕ್ಕಪ್ಪನವರ, ಪ್ರಕಾಶ ಬಾಂಡಗೆ, ಸುರೇಶ ಮರಳಪ್ಪನವರ, ನಾಗರಾಜ ಮೆಣಸಗಿ, ಬಸವರಾಜ ಹಡಪದ, ಹೇಮಂತ ಗಿಡ್ಡಹನುಮಣ್ಣನವರ, ಮಹೇಶ ರೋಖಡೆ, ಸುರೇಶ ಹೆಬಸೂರ, ಕಿರಣ ಕಮತರ, ಶಿವಪ್ಪ ಮುಳ್ಳಾಳ, ವಿರುಪಾಕ್ಷಪ್ಪ ಅಕ್ಕಿ, ಲೋಕನಾಥಸಾ ಬದಿ, ನಂದು ಬೇವಿನಕಟ್ಟಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

## ಕೆಎಸ್‌ಆರ್‌ಟಿಸಿ ಬಸ್ಸಿನಲ್ಲಿ ಅನುಮಾನಾಸ್ಪದವಾಗಿ ಮಡಿಕೇರಿಗೆ ತೆರಳುತ್ತಿದ್ದ 30 ಮಂದಿ ಮೂಲ ಪತ್ತೆ



ಮಂಡ್ಯ: ಇಲ್ಲಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ಅನುಮಾನಾಸ್ಪದವಾಗಿ ಮಡಿಕೇರಿಗೆ ತೆರಳುತ್ತಿದ್ದ ಸುಮಾರು 30 ಮಂದಿ ಅಸ್ಸೋಂ ಮೂಲದವರು ಎಂದು ಪೊಲೀಸರ ತನಿಖೆಯಿಂದ ತಿಳಿದುಬಂದಿದೆ.

ಕೆಲ ಹಿಂದೂಪರ ಸಂಘಟನೆಗಳು ಬಾಂಗ್ಲಾ ದೇಶಿಗಳು ಬಸ್‌ನಲ್ಲಿ ತೆರಳುತ್ತಿದ್ದಾರೆಂಬ ಅನುಮಾನದ ಮೇಲೆ ಬಸ್ ತಡೆದು ಪ್ರತಿಭಟನೆ ನಡೆಸಿದರು.ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ದಾವಿಸಿದ ಹಿರಿಯ ಪೊಲೀಸ್ ಅಧಿಕಾರಿಗಳು ಪರಿಶೀಲನೆ ನಡೆಸಿ ಅನುಮಾನ ವ್ಯಕ್ತವಾದ ಹಿನ್ನೆಲೆಯಲ್ಲಿ ಅವರನ್ನು ಕೂಲಂಕಶವಾಗಿ ಪರಿಶೀಲಿಸಿದಾಗ ಬಹುತೇಕರು ಅಸ್ಸೋಂ ಮೂಲದವರಾಗಿದ್ದು, ಮಡಿಕೇರಿಯ ಕಾಫಿತೋಟದಲ್ಲಿ ಕೆಲಸಕ್ಕೆ ತೆರಳುತ್ತಿದ್ದರು ಎಂದು ಗೊತ್ತಾಗಿದೆ. ಈ ನಡುವೆ ಉತ್ತರ ಪ್ರದೇಶದ ವ್ಯಕ್ತಿಯೂ ಕೂಡ ಈ ತಂಡದಲ್ಲಿದ್ದು, ಪರಿಶೀಲನೆ ನಡೆಸಿ ಎಲ್ಲರನ್ನೂ ಅಲ್ಲಿಗೆ ಕಳುಹಿಸಿಕೊಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.ಮುನ್ನೆಚ್ಚರಿಕೆ ಕ್ರಮವಾಗಿ ಅವರ ಮೊಬೈಲ್ ಸಂಖ್ಯೆ ಹಾಗೂ ದಾಖಲಾತಿಗಳನ್ನು ಸಂಗ್ರಹಿಸಿದ್ದು, ಅದರಲ್ಲಿ ಯಾರೂ ಬಾಂಗ್ಲಾ ದೇಶಿಗಳು ಇರಲಿಲ್ಲ ಎಂಬುದು ಕಂಡುಬಂದಿದೆ ಎಂದು ಹೇಳಿದ್ದಾರೆ. ಮಂಡ್ಯ ಪಶ್ಚಿಮ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಾಗಿದ್ದು, ತನಿಖೆ ಕೈಗೊಳ್ಳಲಾಗಿತ್ತು.

## ಅಮೆರಿಕದಲ್ಲಿ ಭೀಕರ ಅಪಘಾತದಲ್ಲಿ ಭಾರತೀಯ ವಿದ್ಯಾರ್ಥಿ ಬಲಿ

ವಾಷಿಂಗ್ಟನ್: ಆಂಧ್ರಪ್ರದೇಶದ 26 ವರ್ಷದ ಸಾಫ್ಟ್ ವೇರ್ ಎಂಜಿನಿಯರ್ ಒಬ್ಬರು ಅಮೆರಿಕದ ಮ್ಯಾಸಿಡೋನಿಯಾದಲ್ಲಿ ಸಂಭವಿಸಿದ ಭೀಕರ ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ. ಮೃತಪಟ್ಟ ಭಾರತೀಯ ಮೂಲದ ವಿದ್ಯಾರ್ಥಿಯನ್ನು ಆಂಧ್ರಪ್ರದೇಶದ ದಿಲೀಪ್ ಕುಮಾರ್ ಬುಂಗಟಾವುಲ ಎಂದು ಗುರುತಿಸಲಾಗಿದೆ.



ಆಂಧ್ರಪ್ರದೇಶದ ಕಡಪ ಜಿಲ್ಲೆಯ ಜೆಟ್ಟಿವರಿಪಲ್ಲಿ ಗ್ರಾಮದ ಮೂಲದ ಬುಂಗಟಾವುಲ ಅವರು ಕೆಂಟ್ ಸ್ಟೇಟ್ ಯೂನಿವರ್ಸಿಟಿಯಲ್ಲಿ ಉನ್ನತ ಶಿಕ್ಷಣ ಪಡೆಯಲು ಅಮೆರಿಕಕ್ಕೆ ಹೋಗಿದ್ದರು, ಅಲ್ಲಿಂದ ಅವರು 2025 ರಲ್ಲಿ ತಮ್ಮ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿದರು. ಓಹಿಯೋದ ಮ್ಯಾಸಿಡೋನಿಯಾ ಪ್ರದೇಶದಲ್ಲಿ ಇಂಟರ್‌ಸ್ಟೇಟ್ 480 ರಲ್ಲಿ ಅಪಘಾತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬುಂಗಟಾವುಲ ಸೆಡಾನ್‌ನಲ್ಲಿ ಪ್ರಯಾಣಿಸುತ್ತಿದ್ದಾಗ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿದ್ದ ಪಿಕಪ್ ಟ್ರಕ್ ಸೆಂಟರ್ ಮೀಡಿಯನ್ ಅನ್ನು ದಾಟಿ ಅವರ ವಾಹನಕ್ಕೆ ಡಿಕ್ಕಿ ಹೊಡೆದಿದೆ.ತುರ್ತು ಸೇವೆಗಳು ಸ್ಥಳಕ್ಕೆ ಬಂದಾಗ, ಬುಂಗಟಾವುಲ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಮತ್ತು ಅಪಘಾತದಲ್ಲಿ ಮೂವರು ಗಾಯಗೊಂಡಿದ್ದಾರೆ ಎಂದು ಕಂಡುಬಂದಿದೆ. ಮೂವರನ್ನು ಆಸ್ಪತ್ರೆಗೆ ಸಾಗಿಸಲಾಯಿತು, ಅಲ್ಲಿ ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ನ್ಯೂಯಾರ್ಕ್‌ನಲ್ಲಿರುವ ಭಾರತೀಯ ಕಾನ್ಸುಲೇಟ್ ಜನರಲ್ ಭಾರತೀಯ ವ್ಯಕ್ತಿಯ ಸಾವನ್ನು ದೃಢಪಡಿಸಿದ್ದು, ಅವರ ಸ್ವದೇಶದಲ್ಲಿರುವ ಕುಟುಂಬಕ್ಕೆ ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡುತ್ತಿದೆ ಎಂದು ಹೇಳಿದರು. ಆಗಸ್ಟ್ 7, 2026 ರಂದು ಓಹಿಯೋದಲ್ಲಿ ನಡೆದ ಕಾರು ಅಪಘಾತದಲ್ಲಿ ದುರಂತವಾಗಿ ಪ್ರಾಣ ಕಳೆದುಕೊಂಡ ಭಾರತೀಯ ಪ್ರಜೆ ದಿಲೀಪ್ ಕುಮಾರ್ ಬುಂಗಟವುಲ ಅವರ ಅಕಾಲಿಕ ಮರಣದ ಬಗ್ಗೆ ತಿಳಿದು ನಮಗೆ ತುಂಬಾ ದುಃಖವಾಗಿದೆ ಎಂದು ಕಾನ್ಸುಲೇಟ್ ಎಕ್ ಸ ಪೋಸ್ಟ್‌ನಲ್ಲಿ ತಿಳಿಸಿದೆ. ಈ ಕಷ್ಟದ ಸಮಯದಲ್ಲಿ ಅವರ ಕುಟುಂಬದೊಂದಿಗೆ ನಮ್ಮ ಆಲೋಚನೆಗಳು ಮತ್ತು ಹೃತ್ಪೂರ್ವಕ ಸಂತಾಪಗಳು. ಕಾನ್ಸುಲೇಟ್ ಕುಟುಂಬದೊಂದಿಗೆ ಸಂಪರ್ಕದಲ್ಲಿದೆ ಮತ್ತು ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡುತ್ತಿದೆ ಎಂದು ಅದು ಹೇಳಿದೆ.

## ಫುಡ್ ಡೆಲಿವರಿ ಆ್ಯಪ್‌ಗಳ ಮೇಲೂ ಆಹಾರ ಸುರಕ್ಷತಾ ಅಧಿಕಾರಿಗಳ ಕಣ್ಣು




ಬೆಂಗಳೂರು: ನಗರದ ಐಷಾರಾಯಿ ಹೋಟೆಲ್‌ಗಳ ಕಿಚನ್ ಕರ್ಮಕಾಂಡ ಬಯಲಿಗೆಳೆದ ಆಹಾರ ಸುರಕ್ಷತಾ ಪ್ರಾಧಿಕಾರದ ಅಧಿಕಾರಿಗಳ ಕಣ್ಣು ಇದೀಗ ಆನ್‌ಲೈನ್ ಫುಡ್ ಡೆಲಿವರಿ ಆ?ಯಪ್‌ಗಳ ಮೇಲೆ ಬಿದ್ದಿದೆ. ಸಣ್ಣಪುಟ್ಟ ಹೋಟೆಲ್‌ಗಳಷ್ಟೇ ಅಲ್ಲದೆ ನಗರದ ಪ್ರತಿಷ್ಠಿತ ಐಷಾರಾಮಿ ಹೋಟೆಲ್‌ಗಳಲ್ಲೂ ಆಹಾರ ಪದಾರ್ಥಗಳ ಗುಣಮಟ್ಟ ಕಳಪೆಯಾಗಿರುವುದು ದಾಳಿ ವೇಳೆ ಬೆಳಕಿಗೆ ಬಂದಿರುವ ಹಿನ್ನೆಲೆಯಲ್ಲಿ ಆನ್‌ಲೈನ್ ಮೂಲಕ ಗ್ರಾಹಕರ ಮನೆ ಬಾಗಿಲಿಗೆ ತಲುಪುವ ಆಹಾರದ ಮೇಲೂ ನಿಗಾ ಇಡಲು ಆಹಾರ ಸುರಕ್ಷತಾ ಪ್ರಾಧಿಕಾರ ಮುಂದಾಗಿದೆ.

ಆನ್‌ಲೈನ್ ಫುಡ್ ಡೆಲಿವರಿ ವ್ಯವಸ್ಥೆಯಲ್ಲಿ ಆಹಾರ ತಯಾರಿಕೆ, ಪ್ಯಾಕಿಂಗ್ ಹಾಗೂ ಗ್ರಾಹಕರಿಗೆ ತಲುಪುವವರೆಗಿನ ಗುಣಮಟ್ಟವನ್ನು ಪರಿಶೀಲಿಸಲು ಅಧಿಕಾರಿಗಳು ಮುಂದಾಗಿದ್ದಾರೆ.ಇದರ ಜೊತೆಗೆ, ಮುಂದಿನ ವಾರದಿಂದ ಸೆಂಟ್ರಲೈಜ್ಡ್ ಕಿಚನ್‌ಗಳ ಮೇಲೂ ವಿಶೇಷ ಪರಿಶೀಲನೆ ನಡೆಸಲು ಇಲಾಖೆ ಯೋಜನೆ ರೂಪಿಸಿದೆ. ನಗರದ ಹಲವು ಸೆಂಟ್ರಲೈಜ್ಡ್ ಕಿಚನ್‌ಗಳಲ್ಲಿ ಒಂದೇ ಕಡೆ ದೊಡ್ಡ ಪ್ರಮಾಣದಲ್ಲಿ ಆಹಾರ ತಯಾರಿಸಿ, ವಿವಿಧ ರೆಸ್ಟೋರೆಂಟ್‌ಗಳು ಹಾಗೂ ಫುಡ್ ಡೆಲಿವರಿ ವ್ಯವಸ್ಥೆಗಳ ಮೂಲಕ ಗ್ರಾಹಕರಿಗೆ ಸರಬರಾಜು ಮಾಡಲಾಗುತ್ತದೆ. ಹೀಗಾಗಿ ಒಂದೇ ಅಡುಗೆಮನೆಯಿಂದ ದೊಡ್ಡ ಪ್ರಮಾಣದ ಆಹಾರ ಹಲವು ಕಡೆಗಳಿಗೆ ತಲುಪುವುದರಿಂದ, ಅಲ್ಲಿನ ಸ್ವಚ್ಛತೆ, ಆಹಾರ ತಯಾರಿಕೆಯ ಗುಣಮಟ್ಟ, ಸಂಗ್ರಹಣೆ ಹಾಗೂ ಸುರಕ್ಷತಾ ಕ್ರಮಗಳ ಪರಿಶೀಲನೆಗೆ ಅಧಿಕಾರಿಗಳು ಹೆಚ್ಚಿನ ಆದ್ಯತೆ ನೀಡಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ಆಹಾರ ಸುರಕ್ಷತಾ ಪ್ರಾಧಿಕಾರದ ಆಯುಕ್ತ ಶ್ರೀನಿವಾಸ್, ಮುಂದಿನ ವಾರದಿಂದ ಸೆಂಟ್ರಲೈಜ್ಡ್ ಕಿಚನ್‌ಗಳ ಮೇಲೂ ಪರಿಶೀಲನೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ. ಒಟ್ಟಿನಲ್ಲಿ, ಹೋಟೆಲ್‌ಗಳ ಬಳಿಕ ಇದೀಗ ಆನ್‌ಲೈನ್ ಫುಡ್ ಮತ್ತು ಸೆಂಟ್ರಲೈಜ್ಡ್ ಕಿಚನ್‌ಗಳತ್ತವೂ ಆಹಾರ ಸುರಕ್ಷತಾ ಪ್ರಾಧಿಕಾರದ ಚಾಟಿ ಬೀಸಲಿದ್ದು, ಕಳಪೆ ಆಹಾರ ಪೂರೈಸುವವರಿಗೆ ಬಿಸಿ ಮುಟ್ಟಿಸಲು ಅಧಿಕಾರಿಗಳು ಸಜ್ಜಾಗಿದ್ದಾರೆ.

ಜನಶ್ರೀ ಟೈಮ್ಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಗೌತಮ್ ಅದಾನಿ ವಿರುದ್ಧ ಅಮೆರಿಕದ ನ್ಯಾಯಾಲಯದಲ್ಲಿದ್ದ ಕ್ರಿಮಿನಲ್ ಪ್ರಕರಣ ವಜಾ



ವಾಷಿಂಗ್ಟನ್:ಭಾರತೀಯ ಉದ್ಯಮಿ, ಅದಾನಿ ಗ್ರೂಪ್‌ನ ಮುಖ್ಯಸ್ಥ ಗೌತಮ್ ಅದಾನಿ ವಿರುದ್ಧ ಅಮೆರಿಕದ ನ್ಯಾಯಾಲಯದಲ್ಲಿದ್ದ ವಂಚನೆ ಮತ್ತು ಲಂಚದ ಕ್ರಿಮಿನಲ್ ಆರೋಪ ಪ್ರಕರಣಗಳನ್ನು ಅಮೆರಿಕದ ನ್ಯಾಯಾಧೀಶರು ಅಧಿಕೃತವಾಗಿ ವಜಾಗೊಳಿಸಿದ್ದಾರೆ.

ಪ್ರಾಸಿಕ್ಯೂಟರ್‌ಗಳ ಅಪರೂಪದ ಮನವಿಯನ್ನು ಪುರಸ್ಕರಿಸಿ ಬ್ರೂಕ್ಲಿನ್ ಜಿಲ್ಲಾ ನ್ಯಾಯಾಧೀಶ ನಿಕೋಲಸ್ ಗರೋಫಿಸ್ ಈ ತೀರ್ಪು ನೀಡಿದ್ದಾರೆ.

ಅಮೆರಿಕದ ನ್ಯಾಯಾಂಗ ಇಲಾಖೆಯ ಪ್ರಾಸಿಕ್ಯೂಟರ್‌ಗಳು ಈ ಪ್ರಕರಣವನ್ನು ಕೈಬಿಡುವಂತೆ ಕೋರಿದ್ದರು. ಇದನ್ನು ಪರಿಶೀಲಿಸಿದ ನ್ಯಾಯಾಧೀಶ ನಿಕೋಲಸ್ ಗರೋಫಿಸ್, ಆರೋಪ ಪ್ರಕರಣವನ್ನು ವಜಾಗೊಳಿಸುವುದಾಗಿ ಘೋಷಿಸಿದ್ದಾರೆ. 2024ರಲ್ಲಿ ಭಾರತದಲ್ಲಿ ಸೌರಶಕ್ತಿ ಸ್ಥಾವರ ನಿರ್ಮಾಣಕ್ಕಾಗಿ ಅನುಮೋದನೆ ಪಡೆಯಲು ಸರ್ಕಾರಿ ಅಧಿಕಾರಿಗಳಿಗೆ ಲಂಚ ನೀಡಲು ಒಪ್ಪಿಕೊಂಡಿದ್ದಾರೆ ಹಾಗೂ ಅಮೆರಿಕದ ಹೂಡಿಕೆದಾರರನ್ನು ದಾರಿ ತಪ್ಪಿಸಿದ್ದಾರೆಂಬ ಗಂಭೀರ ಆರೋಪಗಳು ಗೌತಮ್ ಅದಾನಿ ವಿರುದ್ಧ ಕೇಳಿಬಂದಿದ್ದವು. ಪ್ರಕರಣವನ್ನು ಕೈಬಿಡುವ ನಿರ್ಧಾರ ಕಾನೂನುಬದ್ಧವಾಗಿದ್ದರೂ, ನ್ಯಾಯಾಂಗ ಇಲಾಖೆಯ ಉನ್ನತ ಅಧಿಕಾರಿಗಳು ತನಿಖಾಧಿಕಾರಿಗಳ ಅಭಿಪ್ರಾಯವನ್ನು ಕಡೆಗಣಿಸಿ ಏಕಾಏಕಿ ಈ ನಿರ್ಧಾರ ತೆಗೆದುಕೊಂಡಿರುವುದು ಕಳವಳಕಾರಿ ಎಂದು ನ್ಯಾಯಾಧೀಶರು ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೆ ಅಮೆರಿಕದಲ್ಲಿ 10 ಬಿಲಿಯನ್ ಡಾಲರ್ ಹೂಡಿಕೆ ಮಾಡುವ ಅದಾನಿ ಅವರ ಭರವಸೆಗೂ ಈ ಪ್ರಕರಣದ ವಜಾಗೂ ನೇರ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

**ಗೌತಮ್ ಅದಾನಿ ಪ್ರತಿಕ್ರಿಯೆ:**

ನ್ಯಾಯಾಲಯದ ತೀರ್ಪಿನ ಕುರಿತು ಎಕ್?ಸನಲ್ಲಿ ಪ್ರತಿಕ್ರಿಯಿಸಿರುವ ಗೌತಮ್ ಅದಾನಿ, ನಾನು ಅಮೆರಿಕದ ನ್ಯಾಯಾಲಯದ ತೀರ್ಪನ್ನು ನಮ್ರತೆ ಮತ್ತು ನ್ಯಾಯಾಂಗ ಪ್ರಕ್ರಿಯೆಯನ್ನು ಗೌರವದಿಂದ ಸ್ವಾಗತಿಸುತ್ತೇನೆ ಎಂದು ತಿಳಿಸಿದ್ದಾರೆ. ಅದಾನಿ ಗ್ರೂಪ್ ಆರಂಭದಿಂದಲೂ ತಮ ಮೇಲಿನ ಎಲ್ಲಾ ಆರೋಪಗಳನ್ನು ನಿರಾಕರಿಸುತ್ತಾ ಬಂದಿದೆ. ಕ್ರಿಮಿನಲ್ ಪ್ರಕರಣ ವಜಾಗೊಂಡಿದ್ದರೂ, ಸಂಬಂಧಿತ ಇಲಾಖೆಗಳೊಂದಿಗೆ ನಡೆದ ಇತರ ಪ್ರಕ್ರಿಯೆಗಳಲ್ಲಿ ಅದಾನಿ ಗುಂಪು ದಂಡ ಹಾಗೂ ಹಣಕಾಸಿನ ಒಡಂಬಡಿಕೆಗಳಿಗೆ ಒಪ್ಪಿಗೆ ಸೂಚಿಸಿದೆ. ಯುಎಸ್ ಸೆಕ್ಯುರಿಟೀಸ್ ಮತ್ತು ಎಕ್ಸ್ಚೇಂಜ್ ಕಮಿಷನ್ ತಂದ ಸಿವಿಲ್ ಆರೋಪಗಳ ಇತ್ಯರ್ಥ-'ಕ್ಕಾಗಿ ಗೌತಮ್ ಅದಾನಿ 6 ಮಿಲಿಯನ್ ಡಾಲರ್ ಹಾಗೂ ಅವರ ಸೋದರಳಿಯ ಸಾಗರ್ ಅದಾನಿ 12 ಮಿಲಿಯನ್ ಡಾಲರ್ ಪಾವತಿಸಲು ಒಪ್ಪಿಕೊಂಡಿದ್ದಾರೆ.

ಇರಾನ್ ಮೇಲಿನ ನಿರ್ಬಂಧಗಳ ಉಲ್ಲಂಘನೆ ಆರೋಪಗಳನ್ನು ಇತ್ಯರ್ಥಪಡಿಸಲು ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್ ಪ್ರತ್ಯೇಕವಾಗಿ ಯುಎಸ್ ಖಜಾನೆ ಇಲಾಖೆಗೆ 275 ಮಿಲಿಯನ್ ಡಾಲರ್ ಪಾವತಿಸಲು ಒಪ್ಪಿಗೆ ನೀಡಿದೆ.

# ಅಮಿತ್ ಶಾ ಉತ್ತರಿಸುವಾಗ ರಾಹುಲ್ ಓಡಿ ಹೋಗಬಾರದು ; ರಾಹುಲ್‌ಗಾಂಧಿ ಕಾಲೆಳೆದ ರಿಜಿಜು



ನವದೆಹಲಿ: ವಿದ್ಯಾರ್ಥಿಗಳ ಪ್ರತಿಭಟನೆ ಕುರಿತಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸಂಸತ್‌ನಲ್ಲಿ ಉತ್ತರಿಸಲಿದ್ದಾರೆ. ಆಗ ನೀವು ಅಲ್ಲಿಂದ ಓಡಿ ಹೋಗಬಾರದು ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಪ್ರತಿಪಕ್ಷದ ನಾಯಕ ರಾಹುಲ್‌ಗಾಂಧಿ ಅವರ ಕಾಲೆಳೆದಿದ್ದಾರೆ.

ಇತ್ತೀಚಿನ ವಿದ್ಯಾರ್ಥಿಗಳ ಪ್ರತಿಭಟನೆ ಮತ್ತು ಪ್ರತಿಭಟನಾಕಾರರ ವಿರುದ್ಧ ಪೊಲೀಸ್ ಕ್ರಮದ ಕುರಿತು ಸರ್ಕಾರ ಮತ್ತು ವಿರೋಧ ಪಕ್ಷದ ನಡುವೆ ನಡೆಯುತ್ತಿರುವ ಘರ್ಷಣೆಯ ಮಧ್ಯೆ ರಿಜಿಜು ಅವರ ಹೇಳಿಕೆಗಳು ಬಂದವು. ಈ ವಿಷಯವು ಸಂಸತ್ತಿನಲ್ಲಿ ಪದೇ ಪದೇ ಗದ್ದಲಕ್ಕೆ ಕಾರಣವಾಯಿತು, ವಿರೋಧ ಪಕ್ಷವು ಸರ್ಕಾರದಿಂದ ಉತ್ತರಗಳನ್ನು ಕೋರಿತು ಮತ್ತು ರಾಹುಲ್ ಗಾಂಧಿ ಅವರು, ಶಾ ಅವ-ರಿಂದ ಪ್ರತಿಕ್ರಿಯೆಯನ್ನು ಕೋರಿದರು. ಸರ್ಕಾರವು ಈಗ ಈ ವಿಷಯದ ಬಗ್ಗೆ ಚರ್ಚೆಯನ್ನು ನೀಡಿದೆ, ಗೃಹ ಸಚಿವರು ಪ್ರತಿಕ್ರಿಯಿಸಲಿದ್ದಾರೆ.ಸಾಮಾಜಿ-ಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ರಿಜಿಜು, ರಾಹುಲ್ ಗಾಂಧಿ ಹಲವಾರು ದಿನಗಳಿಂದ ಅಮಿತ್ ಶಾ ಅವರಿಂದ ಪ್ರತಿಕ್ರಿಯೆಯನ್ನು ಕೋರುತ್ತಿದ್ದಾರೆ ಎಂದು ಹೇಳಿದ್ದಾರೆ.

ಶಾ ಈಗ ಪ್ರಶ್ನೆಗಳಿಗೆ ವಿವರವಾಗಿ ಉತ್ತ-ರಿಸಲು ಸಿದ್ಧರಾಗಿರುವುದರಿಂದ, ಕಾಂಗ್ರೆಸ್ ನಾಯಕರು ಹಾಜರಿರಬೇಕು ಮತ್ತು ಚರ್ಚೆಯಲ್ಲಿ ಭಾಗವಹಿಸಬೇಕು ಎಂದು ಅವರು ವಾದಿಸಿದರು. ಅಯೋಧ್ಯೆಯ ರಾಮ ಮಂದಿರದಲ್ಲಿ ಬೃಹತ್ ಆರ್ಥಿಕ ವಂಚನೆ, ಕಳ್ಳತನ ಮತ್ತು ಸಾರ್ವಜನಿಕ ದೇಣಿಗೆಗಳ ದುರುಪಯೋಗದ ಆಘಾತಕಾರಿ ಬಹಿರಂಗಪಡಿಸುವಿಕೆ ಎಂದು ಅವರು ವಿವರಿಸಿದ ವಿಷಯದ ಬಗ್ಗೆ ತುರ್ತು ಚರ್ಚೆಗೆ ಕೋರಿ ಕಾಂಗ್ರೆಸ್ ಸಂಸದ ಕೆ.ಸಿ. ವೇಣುಗೋಪಾಲ್ ಲೋಕಸಭೆಯಲ್ಲಿ ಮುಂದೂಡಿಕೆ ಗೊತ್ತುವಳಿ ನೋಟಿಸ್ ಸಲ್ಲಿಸಿದ್ದಾರೆ. ಇಂದು ಲೋಕಸಭಾ ಸಚಿವಾಲಯಕ್ಕೆ ಸಲ್ಲಿಸಿದ ನೋಟಿಸ್‌ನಲ್ಲಿ, ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನೊಳಗೆ ಹೆಚ್ಚು ಸಂಘಟಿತ ದಂಧೆ ಕಾರ್ಯನಿರ್ವಹಿಸುತ್ತಿದೆ ಎಂದು ವೇಣುಗೋಪಾಲ್ ಆರೋಪಿಸಿದ್ದಾರೆ, ಭಕ್ತರು ದಾನ ಮಾಡಿದ ನಗದು ಮತ್ತು ಅಮೂಲ್ಯವಾದ ಆಭರಣಗಳ ಬಂಡಲ್‌ಗಳನ್ನು ವ್ಯವಸ್ಥಿತವಾಗಿ ಕದ್ದಾಲಿಸಲಾಗಿದೆ ಎಂದು ಆರೋಪಿಸಲಾಗಿದೆ.ಈ ವಿಷಯವು ತುರ್ತು ಮಹತ್ವದ್ದಾಗಿದೆ ಎಂದು ವೇಣುಗೋಪಾಲ್ ಹೇಳಿದರು ಮತ್ತು ಚರ್ಚೆಗಾಗಿ ಸದನದ ನಿಯಮಿತ ವ್ಯವಹಾರವನ್ನು ಸ್ಥಗಿ-ತಗೊಳಿಸುವಂತೆ ಒತ್ತಾಯಿಸಿದರು. ಕೆಎಸ್‌ಆರ್‌ಟಿಸಿ ಬಸ್ಸಿನಲ್ಲಿ ಅನುಮಾನಾಸ್ಪದವಾಗಿ ಮಡಿಕೇರಿಗೆ ತೆರಳುತ್ತಿದ್ದ 30 ಮಂದಿ ಮೂಲ ಪತ್ತೆ ಅಮೆರಿಕದಲ್ಲಿ ಭೀಕರ ಅಪಘಾತದಲ್ಲಿ ಭಾರ.

# ಕನ್ನಡಪರ ಸಂಘಟನೆಗಳ 'ಕರ್ನಾಟಕ ಬಂದ್' ಗೊಂದಲ



ಬೆಂಗಳೂರು: ತಮಿಳುನಾಡಿಗೆ ಕಾವೇರಿ ನೀರು ಹರಿಸುವ ಹಿನ್ನೆಲೆಯಲ್ಲಿ ಕರ್ನಾಟಕ ಬಂದ್‌ಗೆ ಕರೆ ಕೊಟ್ಟಿದ್ದ ಕನ್ನಡಪರ ಸಂಘಟನೆಗಳಲ್ಲಿ ಒಮತದ ಕೊರತೆ ಕಂಡುಬಂದಿದೆ. ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸುವ ತೀರ್ಪಿನ ವಿರುದ್ದ ಇದೇ 13ರಂದು ಕನ್ನಡಪರ ಚಳುವಳಿ ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಅಖಿಲ ಕರ್ನಾಟಕ ಬಂದ್‌ಗೆ ಕರೆ ನೀಡಲಾಗಿತ್ತು.

ಕಾವೇರಿ ಜಲಾಯನ ಪ್ರದೇಶದಲ್ಲಿ ಮಳೆ ಕೊರತೆ ಉಂಟಾಗಿ ಆ ಭಾಗದ ಜಲಾಶಯಗಳಲ್ಲಿ ನೀರಿನ ಕೊರತೆ ಇತ್ತು. ನಂತರದ ಬೆಳವಣಿಗೆಯಲ್ಲಿ ಜಲಾನಯನ ಪ್ರದೇಶದಲ್ಲಿ ಮಳೆಯಾಗಿ ಜಲಾಶಯಗಳಿಗೆ ನೀರು ಹರಿದುಬಂದು ತಮಿಳು ನಾಡಿಗೆ ನೀರನ್ನು ಬಿಡಲಾಗಿತ್ತು. ಈ ಹಿನ್ನೆಲೆಯಲ್ಲಿ ಕರ್ನಾಟಕ ಬಂದ್ ಆಚರಣೆ ಬಗ್ಗೆ ಕನ್ನಡಪರ ಸಂಘಟನೆಗಳಲ್ಲಿ ಗೊಂದಲ ಉಂಟಾಗಿದೆ. ಆ.13ರಂದು ನಿಗದಿಯಂತೆ ಬಂದ್ ಆಚರಣೆ ಮಾಡೇ ಮಾಡುತ್ತೇವೆ ಎಂದು ವಾಟಾಳ್ ನಾಗರಾಜ್ ಅವರು ಖಂಡಾತುಂಡವಾಗಿ ಹೇಳಿದ್ದಾರೆ. ಆದ-'ರೆ ಕನ್ನಡಪರ ಸಂಘಟನೆಗಳ ಮುಖಂಡರಾದ ಪ್ರವೀಣ್‌ಕುಮಾರ್ ಶೆಟ್ಟಿ, ಶಿವರಾಮೇಗೌಡ, ಸಾ.ರಾ.ಗೋವಿಂದು ಮತ್ತಿತರರು ಸದ್ಯದ ಪರಿಸ್ಥಿತಿಯಲ್ಲಿ ಬಂದ್ ಮಾಡುವುದು ಬೇಡ ಎಂಬ ತೀರ್ಮಾನಕ್ಕೆ ಬಂದಿದ್ದಾರೆ ಎನ್ನಲಾಗಿದೆ.

ಈಗಾಗಲೇ ಜಲಾನಯನ ಪ್ರದೇಶದಲ್ಲಿ ಮಳೆಯಾಗಿ ತಮಿಳುನಾಡಿಗೆ ನಾಲ್ಕೂವರೆ ಟಿಎಂಸಿ ನೀರು ಬಿಡಲಾಗಿದೆ. ಜಲಾಶಯಗಳಲ್ಲಿ ಸ್ವಲ್ಪ ಪ್ರಮಾಣದ ನೀರು ಸಂಗ್ರಹವಾಗಿದೆ. ಇಂತಹ ಸಂದರ್ಭದಲ್ಲಿ ನಾವು ಬಂದ್ ಮಾಡುವುದು ಸಮಂಜಸವೇ ಎಂದು ಹೋರಾಟಗಾರರು ಚರ್ಚೆ ನಡೆಸಿದ್ದಾರೆ.

ಬಂದ್‌ಗೆ ಬೆಂಬಲ ನೀಡುವಂತೆ ಹೋಟೆಲ್ ಮಾಲೀಕರ ಸಂಘವಾಗಲಿ, ಇನ್ನಿತರ ಸಂಘವಾಗಲಿ ಈವರೆಗೆ ಬಂದ್ ಆಯೋಜ-ಕರು ಪತ್ರ ಬರೆದು ಮನವಿ ಮಾಡಿಲ್ಲ ಎಂದು ತಿಳಿದುಬಂದಿದೆ.

ಬಂದ್ ಹಿನ್ನೆಲೆಯಲ್ಲಿ ಮುಂದಿನ ಹೋರಾಟದ ರೂಪುರೇಷೆ ಹಾಗೂ ಮುಂದಿನ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲು ನಾಳೆ ಬೆಳಗ್ಗೆ ಪ್ರವೀಣ್ ಕುಮಾರ್ ಶೆಟ್ಟಿ ನೇತೃತ್ವದ ಕರವೇ ಬಣ ಸಭೆ ಕರೆದಿದೆ. ವಾಟಾಳ್ ನೇತೃತ್ವದಲ್ಲಿ ಈಗಾಗಲೇ ಮೈಸೂರು, ಮಂಡ್ಯ, ಅತ್ತಿಬೆಲೆ ಗಡಿಯಲ್ಲಿ ಪ್ರತಿಭಟನೆಗಳನ್ನು ನಡೆಸಲಾಗಿದ್ದು, ಬಂದ್ ನಡೆಸಲು ತಯಾರಿ ಮಾಡಿಕೊಳ್ಳಲಾಗಿದೆ. ಬಂದ್ ಯಾವ ಸ್ವರೂಪವಿರುತ್ತದೆ? ಹೋರಾಟಗಾರರು ಯಾವ ರೀತಿ ಪ್ರತಿಭಟನೆ ನಡೆಸಲಿದ್ದಾರೆ? ಬಂದ್ ಮಾಡುತ್ತಾರೆಯೇ? ಅಥವಾ ಹಿಂದೆ ಸರಿಯಲಿದ್ದಾರೆಯೇ? ಬಂದ್ ಬದಲು ಬೇರೆಯ ರೀತಿಯ ಹೋರಾಟ ಮಾಡಲಿದ್ದಾರೆಯೇ ಎಂಬ ಬಗ್ಗೆ ಕಾದು ನೋಡಬೇಕು.

# ಅತಿಯಾದ ಕಾಂಗ್ರೆಸ್ ಹೈಕಮಾಂಡ್ ಹಸ್ತಕ್ಷೇಪ : ರಾಜ್ಯ ನಾಯಕರ ಅಸಮಾಧಾನ



ಬೆಂಗಳೂರು: ಸಂಪುಟದ ನೂತನ ಸಚಿವ-ರಿಗೆ ಖಾತೆ ಹಂಚಿಕೆಗೆ ಸಂಬಂಧ ಪಟ್ಟಂತೆ ಹೈಕಮಾಂಡ್‌ನ ಅತಿಯಾದ ಹಸ್ತಕ್ಷೇಪ ರಾಜ್ಯ ನಾಯಕರಲ್ಲಿ ಅಸಹನೆಯ ವಾತಾವರಣ ಸೃಷ್ಟಿಸಿದೆ. ಇತ್ತೀಚಿನ ದಿನಗಳಲ್ಲಿ ನಾಯಕತ್ವ ಬದಲಾವಣೆ, ಸಂಪುಟ ವಿಸ್ತರಣೆ ಹಾಗೂ ಖಾತೆ ಹಂಚಿಕೆ ಸೇರಿದಂತೆ ಎಲ್ಲಾ ವಿಚಾರಗಳಲ್ಲಿ ಹೈಕಮಾಂಡ್ ಅಗತ್ಯ ಮೀರಿ ಮೂಗು ತೂರಿಸುತ್ತಿದೆ ಎಂಬ ಆರೋಪಗಳಿವೆ.

ನಾಯಕತ್ವ ಬದಲಾವಣೆ ವಿಚಾರವಾಗಿ ಸಿದ್ದರಾಮಯ್ಯ ಅವರನ್ನು ಸ್ಥಾನ ಪಲ್ಲಟ ಮಾಡಿದ ಹೈಕಮಾಂಡ್ ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿಯನ್ನಾಗಿ ನಿಯೋಜಿಸಿತ್ತು.ಆ ನಂತರ ಪ್ರತಿ ವಿಚಾರದಲ್ಲೂ ಹೈಕಮಾಂಡ್ ಹಗ್ಗ-ಮೂಗುದಾರಗಳನ್ನು ಬಿಗಿಯಾಗಿ ಹಿಡಿದುಕೊಂಡು ಕುಳಿತಿದೆ. ರಾಜ್ಯ ಸರ್ಕಾರದಲ್ಲಿ ಪ್ರತಿ ಬೆಳವಣಿಗೆಯ ಮೇಲೂ ನಿಯಂತ್ರಣ ಸಾಧಿಸುವ ಹೈಕಮಾಂಡ್‌ನ ಪ್ರಯತ್ನದಿಂದಾಗಿ ಆಡಳಿತ ವ್ಯವಸ್ಥೆ ಹಳ್ಳ ಹಿಡಿಯುತ್ತಿದೆ. ನೂತನ ಸರ್ಕಾರ ರಚನೆಯಾಗಿ ಎರಡು ತಿಂಗಳು ಕಳೆದ ಬಳಿಕ ಸಂಪುಟ ವಿಸ್ತರಣೆಗೆ ಅವಕಾಶ ಮಾಡಿಕೊಡಲಾಯಿತು. ಪೂರ್ಣ ಪ್ರಮಾಣದ ಸಂಪುಟ ಬದಲಾಗಿ ಮತ್ತು ಒಂದು ಸ್ಥಾನವನ್ನು ಉಳಿಸಿಕೊಳ್ಳಲಾಗಿದೆ.ನೂತನವಾಗಿ ಸಂಪುಟಕ್ಕೆ ಸೇರಿದ ಸಚಿವರಿಗೆ 8 ದಿನ ಕಳೆದರೂ ಖಾತೆ ಹಂಚಿಕೆಯಾಗಿಲ್ಲ. ವಿಧಾನಮಂಡಲ ಅಧಿವೇಶನಕ್ಕೆ ಇನ್ನೂ ಒಂದು ದಿನ ಮಾತ್ರ ಇದೆ. ದೆಹಲಿಗೆ ತೆರಳಿದ ಡಿ.ಕೆ.ಶಿವಕುಮಾರ್ ಹೈಕಮಾಂಡ್ ಜೊತೆ ಸಭೆ ನಡೆಸಿ, ಖಾತೆಗಳ ಹಂಚಿಕೆ ವಿಚಾರವಾಗಿ ಮಾಹಿತಿ ನೀಡಿ ಬಂದಿದ್ದಾರೆ.

ಅದನ್ನು ಆಧರಿಸಿ ಡಿ.ಕೆ.ಶಿವಕುಮಾರ್ ಅವರು ಕೆಲ ಸಚಿವರುಗಳಿಗೆ ಕರೆ ಮಾಡಿ ಯಾವ ಖಾತೆ ನೀಡಲಾಗುತ್ತಿದೆ ಎಂಬ ಮಾಹಿತಿ ನೀಡಿದ್ದಾರೆ. ಆದರೆ ಅಧಿಕೃತವಾದ ಆದೇಶ ಹೊರ ಬೀಳುವವ-ರಿಗೂ ಯಾವುದೇ ಖಚಿತತೆ ಇರುವುದಿಲ್ಲ. ಹೀಗಾಗಿ ಖಾತೆಗಳ ಬಗ್ಗೆ ತಿಳುವಳಿಕೆ ಇದ್ದರೂ, ಸಚಿವರು ಕಾರ್ಯಭಾರ ವಹಿಸಿಕೊಳ್ಳಲಾಗುತ್ತಿಲ್ಲ. ಅನೌಪಚಾರಿತವಾಗಿ ಸಂಬಂಧಪಟ್ಟ ಖಾತೆಗಳ ಹಿರಿಯ ಅಧಿಕಾರಿಗಳೊಂದಿಗೆ ದೂರವಾಣಿಯಲ್ಲಿ ಚರ್ಚೆ ನಡೆಸಿದ್ದಾರೆ. ಸಂಬಂಧಪಟ್ಟ ಇಲಾಖೆಗಳಿಗೆ ವಿಧಾನಮಂಡಲದಲ್ಲಿ ಕೇಳಲಾಗುವ ಪ್ರಶ್ನೆಗಳು, ನಿಳುವಳಿ ಸೂಚನೆ, ಗಮನ ಸೆಳೆಯುವ ಸೂಚನೆ ಸೇರಿದಂತೆ ಇತರ ಪ್ರಸ್ತಾವನೆಗಳ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ. ನಿನ್ನೆ ಸಂಜೆಯೇ ಖಾತೆ ಹಂಚಿಕೆಯಾಗಬಹುದು ಎಂದು ಹೇಳಲಾಗಿತ್ತು. ಖುದ್ದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂಜೆ ಒಳಗಾಗಿ ಖಾತೆ ಹಂಚಿಕೆಯಾಗಲಿದೆ ಎಂದು ನಿನ್ನೆ ಕೋಲಾರದಲ್ಲಿ ಹೇಳಿದ್ದರು. ಆದರೆ ಹೈಕಮಾಂಡ್ ಪಟ್ಟಿ ರವಾನಿಸದೇ ಇರುವುದರಿಂದ ಈಗಲೂ ಖಾತೆ ಹಂಚಿಕೆಯಾಗಿಲ್ಲ. ಬಹುತೇಕ ಇಂದು ಖಾತೆ ಹಂಚಿಕೆ ಪಟ್ಟಿಯನ್ನು ಹೈಕಮಾಂಡ್ ಮುಖ್ಯಮಂತ್ರಿಯವರಿಗೆ ಕಳುಹಿಸಲಿದೆ. ಅಲ್ಲಿಂದ ರಾಜ್ಯಭವನಕ್ಕೆ ಪಟ್ಟಿ ರವಾನೆಯಾಗುತ್ತದೆ ಎಂದು ಹೇಳಲಾಗುತ್ತಿದೆ.

ಅಧಿವೇಶನದ ಹಿಂದಿನ ದಿನ ಸಚಿವರು ಖಾತೆಗಳ ಜವಾಬ್ದಾರಿ ವಹಿಸಿಕೊಳ್ಳುವ ಬೆಳವಣಿಗೆ ರಾಜ್ಯದಲ್ಲಿ ಹೊಸದು. ಹೈಕಮಾಂಡ್ ಉದ್ದೇಶ ಪೂರಕವಾಗಿಯೇ ಪ್ರತಿ ಹಂತದಲ್ಲೂ ಮೂಗು ತುರಿಸುತ್ತಿದೆ ಎಂದು ಹೇಳಲಾಗುತ್ತಿದೆ. ಸಂಪುಟ ವಿಸ್ತರಣೆಗೆ ಅನುಮತಿ ನೀಡಲು 4 ದಿನ ಕಾಯಿಸಿ, ನಂತರ 5ನೇ ದಿನ ಪಟ್ಟಿ ರವಾನಿಸಿತ್ತು. ಸಂಪುಟ ವಿಸ್ತರಣೆಗೆ 8 ದಿನ ಕಳೆದರೂ ವಿಳಂಬ ಮಾಡುವ ಮೂಲಕ ತನ್ನ ಪಾರುಪತ್ಯವನ್ನು ಸಾಬೀತುಪಡಿಸುವ ಪ್ರಯತ್ನ ಹೈಕಮಾಂಡ್ ಮಾಡುವಂತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕಾಂಗ ನಾಯಕನ ಆಯ್ಕೆ ಶಾಸಕರ ಹೊಣೆಗಾರಿಕೆ. ನಂತರ ಸಂಪುಟ ವಿಸ್ತರಣೆ, ಪುನರ್ ರಚನೆ, ಖಾತೆ ಹಂಚಿಕೆ ಎಲ್ಲವೂ ಮುಖ್ಯಮಂತ್ರಿಯವರ ಪರಮಾಧಿಕಾರ. ಆದರೆ ಅದು ನೆಪ ಮಾತ್ರಕ್ಕೆ ಎಂಬಂತಾಗಿದೆ.

ಡಿ.ಕೆ.ಶಿವಕುಮಾರ್ ಅವರು ಎಲ್ಲಾ ವಿಚಾರಗಳಲ್ಲೂ ಹೈಕಮಾಂಡ್ ಮೇಲೆ ತೀವ್ರ ಅವಲಂಬನೆ ಹೊಂದಿರುವುದು ಕಂಡು ಬರುತ್ತಿದೆ. ಸಿದ್ದರಾಮಯ್ಯ ಅವರಿಂದ ಮುಖ್ಯಮಂತ್ರಿ ಸ್ಥಾನ ಬಿಡಿಸಿಕೊಡಲಾಗಿದೆ ಎಂಬ ಮರ್ಜಿಗೆ ಸಿಲುಕಿರುವ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿಗಿರುವ ಎಲ್ಲಾ ಅಧಿಕಾರಗಳನ್ನು ಹೈಕಮಾಂಡ್ ಮುಂದಿಟ್ಟು, ಅಣತಿ ಪಾಲನೆಗಷ್ಟೇ ಸೀಮಿತವಾದಂತೆ ಕಂಡು ಬರುತ್ತಿದೆ. ವರಿಷ್ಠರ ವಿಪರೀತ ಹಸ್ತಕ್ಷೇಪ ರಾಜ್ಯ ಸರ್ಕಾರದ ಆಡಳಿತದ ಮೇಲೂ ಪರಿಣಾಮ ಬೀರುವ ಸಾಧ್ಯತೆಗಳು ಇವೆ ಎಂಬ ಟೀಕೆ ಕೇಳಿ ಬರುತ್ತಿದೆ.

# ದಾಸವಾಳ ಹೂವು : ಸೌಂದರ್ಯದ ಪ್ರತೀಕ, ಸಂಸ್ಕೃತಿಯ ಸಂಕೇತ, ಪ್ರಕೃತಿಯ ಅಮೂಲ್ಯ ಕೊಡುಗೆ



ಮನೆಯ ಅಂಗಳದಲ್ಲಿ ಬೆಳಗಿನ ಜಾವ ಅರಳಿರುವ ದಾಸವಾಳ ಹೂವನ್ನು ನೋಡಿದಾಗ ಮನಸ್ಸಿಗೆ ಒಂದು ರೀತಿಯ ನೆಮ್ಮದಿ ಮೂಡುತ್ತದೆ. ಕೆಂಪು, ಗುಲಾಬಿ, ಬಿಳಿ, ಹಳದಿ ಸೇರಿದಂತೆ ಹಲವು ಬಣ್ಣಗಳಲ್ಲಿ ಅರಳುವ ದಾಸವಾಳ ತನ್ನ ವಿಶಿಷ್ಟ ಆಕಾರ ಮತ್ತು ಆಕರ್ಷಕ ಸೌಂದರ್ಯದಿಂದ ಎಲ್ಲರ ಮನಸೆಳೆಯುತ್ತದೆ. ಸಾಮಾನ್ಯವಾಗಿ ಮನೆಯ ಕೈತೋಟದಲ್ಲಿ ಸುಲಭವಾಗಿ ಬೆಳೆಸುವ ಈ ಹೂವು ನೋಡಲು ಸುಂದರವಾಗಿರುವುದಷ್ಟೇ ಅಲ್ಲ, ಭಾರತೀಯ ಸಂಸ್ಕೃತಿ, ಧಾರ್ಮಿಕ ಆಚರಣೆಗಳು ಮತ್ತು ಸಾಂಪ್ರದಾಯಿಕ ಜೀವನಶೈಲಿಯಲ್ಲಿಯೂ ವಿಶೇಷ ಸ್ಥಾನವನ್ನು ಪಡೆದಿದೆ.

ದಾಸವಾಳವನ್ನು ನಾವು ಬಹಳ ಸಾಮಾನ್ಯವಾದ ಹೂವು ಎಂದು ಭಾವಿಸಬಹುದು. ಆದರೆ ಅದರ ಹಿಂದೆ ಪ್ರಕೃತಿಯ ಅದ್ಭುತ ವಿನ್ಯಾಸ, ಸಸ್ಯದ ಜೀವಚಕ್ರ, ಪರಾಗಸ್ಪರ್ಶಕ್ಕೆ ಅದರ ಕೊಡುಗೆ ಮತ್ತು ನಮ್ಮ ಪರಂಪರೆಯೊಂದಿಗೆ ಬೆಸೆದುಕೊಂಡಿರುವ ಅನೇಕ ಕಥೆಗಳಿವೆ. ಹೀಗಾಗಿ ದಾಸವಾಳವು ಕೇವಲ ಒಂದು ಅಲಂಕಾರಿಕ ಹೂವಲ್ಲ; ಅದು ಪ್ರಕೃತಿ ಮತ್ತು ಮನುಷ್ಯನ ನಡುವಿನ ಸಂಬಂಧವನ್ನು ಪ್ರತಿಬಿಂಬಿಸುವ ಒಂದು ಸುಂದರ ಸಸ್ಯವಾಗಿದೆ.

**ಮನೆಯ ಅಂಗಳದ ಸೌಂದರ್ಯ ಹೆಚ್ಚಿಸುವ ದಾಸವಾಳ**

ಹೆಚ್ಚಿನ ಆರೈಕೆಯ ಅಗತ್ಯವಿಲ್ಲದೆ ಬೆಳೆಸಬಹುದಾದ ಸಸ್ಯಗಳಲ್ಲಿ ದಾಸವಾಳವೂ ಒಂದು. ಸಾಕಷ್ಟು ಸೂರ್ಯನ ಬೆಳಕು, ಉತ್ತಮ ನೀರು ಹರಿದುಹೋಗುವ ಮಣ್ಣು ಮತ್ತು ನಿಯಮಿತ ನೀರಿನ ವ್ಯವಸ್ಥೆ ಇದ್ದರೆ ದಾಸವಾಳ ಗಿಡ ಚೆನ್ನಾಗಿ ಬೆಳೆಯುತ್ತದೆ. ಒಮ್ಮೆ ಗಿಡ ಚೆನ್ನಾಗಿ ಬೆಳೆದ ನಂತರ ನಿರಂತರವಾಗಿ ಹೊಸ ಕೊಂಬೆಗಳು ಮತ್ತು ಮೊಗ್ಗುಗಳನ್ನು ನೀಡುತ್ತಾ ಹೋಗುತ್ತದೆ. ಬೆಳಿಗ್ಗೆ ಅರಳಿದ ಹೂವು ಮನೆಯ ಅಂಗಳಕ್ಕೆ ಹೊಸ ಕಳೆ ತರುತ್ತದೆ. ಹಸಿರು ಎಲೆಗಳ ಮಧ್ಯೆ ಕಂಗೊಳಿಸುವ ಕೆಂಪು ದಾಸವಾಳವು ಮನೆಯ ಸೌಂದರ್ಯವನ್ನು ಹೆಚ್ಚಿಸುವುದರ ಜೊತೆಗೆ ಪ್ರಕೃತಿಯ ಸೊಬಗನ್ನು ಮನೆಗೆ ತರುತ್ತದೆ. ಇಂದಿನ ದಿನಗಳಲ್ಲಿ ನಗರ ಪ್ರದೇಶಗಳಲ್ಲಿ ಕಾಂಕ್ರೀಟ್ ಕಟ್ಟಡಗಳು ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಮನೆಯ ಬಾಲ್ಕನಿ, ಟೆರೇಸ್ ಅಥವಾ ಸಣ್ಣ ಕೈತೋಟದಲ್ಲಾದರೂ ದಾಸವಾಳದಂತಹ ಹೂವಿನ ಗಿಡಗಳನ್ನು ಬೆಳೆಸುವುದು ಪ್ರಕೃತಿಯೊಂದಿಗೆ ನಮ್ಮ ಸಂಪರ್ಕವನ್ನು ಉಳಿಸಿಕೊಳ್ಳುವ ಒಂದು ಉತ್ತಮ ಮಾರ್ಗವಾಗಿದೆ.

**ದಾಸವಾಳದ ಬಣ್ಣಗಳ ವೈವಿಧ್ಯ**

ದಾಸವಾಳ ಎಂದರೆ ಕೆಂಪು ಹೂವು ಎಂಬ ಕಲ್ಪನೆ ಸಾಮಾನ್ಯ. ಆದರೆ ದಾಸವಾಳದಲ್ಲಿ ಹಲವು ಬಣ್ಣಗಳ ತಳಿಗಳು ಕಂಡುಬರುತ್ತವೆ. ಕೆಂಪು, ಗುಲಾಬಿ, ಬಿಳಿ, ಹಳದಿ, ಕಿತ್ತಳೆ ಸೇರಿದಂತೆ ವಿವಿಧ ಬಣ್ಣಗಳಲ್ಲಿ ದಾಸವಾಳ ಹೂವುಗಳು ಅರಳುತ್ತವೆ. ಕೆಲವು ದಾಸವಾಳ ಹೂವುಗಳು ಒಂದೇ ಪದರದ ದಳಗಳನ್ನು ಹೊಂದಿದ್ದರೆ, ಕೆಲವು ತಳಿಗಳಲ್ಲಿ ಹಲವು ಪದರಗಳ ದಳಗಳು ಕಂಡುಬರುತ್ತವೆ. ಹೂವಿನ ಗಾತ್ರ, ದಳಗಳ ವಿನ್ಯಾಸ ಮತ್ತು ಬಣ್ಣದಲ್ಲಿಯೂ ಸಾಕಷ್ಟು ವೈವಿಧ್ಯವಿದೆ. ಈ ವೈವಿಧ್ಯವೇ ದಾಸವಾಳವನ್ನು ತೋಟಗಾರಿಕೆಯ ದೃಷ್ಟಿಯಿಂದಲೂ ಜನಪ್ರಿಯವಾಗಿಸಿದೆ. ಒಂದೇ ತೋಟದಲ್ಲಿ ವಿವಿಧ ಬಣ್ಣಗಳ ದಾಸವಾಳ ಗಿಡಗಳನ್ನು ಬೆಳೆಸಿದರೆ ಅದು ಮನೆಯ ಸುತ್ತಮುತ್ತಲಿನ ವಾತಾವರಣಕ್ಕೆ ವಿಶೇಷ ಆಕರ್ಷಣೆ ನೀಡುತ್ತದೆ.

**ಪೂಜಾ ಕಾರ್ಯಗಳಲ್ಲಿ ವಿಶೇಷ ಸ್ಥಾನ**

ಭಾರತೀಯ ಸಂಸ್ಕೃತಿಯಲ್ಲಿ ಹೂವುಗಳಿಗೆ ವಿಶೇಷ ಸ್ಥಾನವಿದೆ. ದೇವರಿಗೆ ಹೂವು ಅರ್ಪಿಸುವ ಸಂಪ್ರದಾಯವು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ವಿವಿಧ ದೇವತೆಗಳ ಆರಾಧನೆಯಲ್ಲಿ ವಿವಿಧ ಹೂವುಗಳನ್ನು ಬಳಸಲಾಗುತ್ತದೆ. ದಾಸವಾಳ ಹೂವು, ವಿಶೇಷವಾಗಿ ಕೆಂಪು ದಾಸವಾಳ, ಹಲವು ಕಡೆಗಳಲ್ಲಿ ದೇವಿ ಆರಾಧನೆಯಲ್ಲಿ ಬಳಸಲಾಗುತ್ತದೆ. ದೇವರ ಪೂಜೆಯಲ್ಲಿ ದಾಸವಾಳವನ್ನು ಅರ್ಪಿಸುವುದು ಭಕ್ತಿ ಮತ್ತು ಪಾವಿತ್ರ್ಯದ ಸಂಕೇತವಾಗಿ ಪರಿಗಣಿಸಲಾಗುತ್ತದೆ.

ಹೀಗಾಗಿ ಮನೆಯ ಅಂಗಳದಲ್ಲಿ ಬೆಳೆದ ದಾಸವಾಳದ ಹೂವು ಕೇವಲ ಅಲಂಕಾರಕ್ಕಾಗಿ ಮಾತ್ರವಲ್ಲದೆ ಪ್ರತಿದಿನದ ಪೂಜೆಯಲ್ಲಿಯೂ ಉಪಯೋಗವಾಗುತ್ತದೆ. ಇದರಿಂದ ಮನೆಯಲ್ಲೇ ಬೆಳೆಸುವ ಸಸ್ಯವಾಗಿ ದಾಸವಾಳಕ್ಕೆ ಇನ್ನಷ್ಟು ಮಹತ್ವ ದೊರೆತಿದೆ.

**ಸಾಂಪ್ರದಾಯಿಕ ಆರೋಗ್ಯ ಪದ್ಧತಿಯಲ್ಲಿ ದಾಸವಾಳ**

ದಾಸವಾಳವನ್ನು ಹಲವು ಸಾಂಪ್ರದಾಯಿಕ ಪದ್ಧತಿಗಳಲ್ಲಿ ಬಳಸಿಕೊಂಡು ಬಂದಿರುವ ಉದಾಹರಣೆಗಳಿವೆ. ಹೂವು ಮತ್ತು ಎಲೆಗಳನ್ನು ವಿವಿಧ ರೀತಿಯಲ್ಲಿ ಬಳಸುವ ಸಂಪ್ರದಾಯ ಕೆಲವು ಪ್ರದೇಶಗಳಲ್ಲಿ ಕಂಡುಬರುತ್ತದೆ. ವಿಶೇಷವಾಗಿ ಕೂದಲಿನ ಆರೈಕೆಯಲ್ಲಿ ದಾಸವಾಳಕ್ಕೆ ಸಾಕಷ್ಟು ಜನಪ್ರಿಯತೆ ಇದೆ. ದಾಸವಾಳದ ಹೂವು ಮತ್ತು ಎಲೆಗಳನ್ನು ಅರೆದು ಸಾಂಪ್ರದಾಯಿಕವಾಗಿ ಕೂದಲಿಗೆ ಹಚ್ಚುವ ಪದ್ಧತಿ ಹಲವು ಕುಟುಂಬಗಳಲ್ಲಿ ಇಂದಿಗೂ ಇದೆ.

ದಾಸವಾಳದಲ್ಲಿ ವಿವಿಧ ಸಸ್ಯಜನ್ಯ ಸಂಯುಕ್ತಗಳು ಮತ್ತು ಉತ್ಕರ್ಷಣ ನಿರೋಧಕ ಗುಣಗಳನ್ನು ಹೊಂದಿರುವ ಅಂಶಗಳು ಕಂಡುಬರುತ್ತವೆ. ಇದೇ ಕಾರಣದಿಂದಾಗಿ ದಾಸವಾಳವನ್ನು ಆಧರಿಸಿದ ಕೆಲವು ಸಾಂಪ್ರದಾಯಿಕ ಮತ್ತು ಸೌಂದರ್ಯ ಆರೈಕೆ ಉತ್ಪನ್ನಗಳು ಮಾರುಕಟ್ಟೆಯಲ್ಲಿಯೂ ದೊರೆಯುತ್ತವೆ.

ಆದರೆ ದಾಸವಾಳವನ್ನು ಯಾವುದೇ ನಿರ್ದಿಷ್ಟ ಕಾಯಿಲೆಗೆ ಔಷಧಿಯಂತೆ ಬಳಸುವ ಮೊದಲು ತಜ್ಞರ ಸಲಹೆ ಪಡೆಯುವುದು ಸೂಕ್ತ. ಸಾಂಪ್ರದಾಯಿಕ ಬಳಕೆ ಮತ್ತು ವೈದ್ಯಕೀಯವಾಗಿ ಸಾಬೀತಾದ ಚಿಕಿತ್ಸೆಯ ನಡುವೆ ವ್ಯತ್ಯಾಸವಿದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

**ಕೂದಲಿನ ಸೌಂದರ್ಯಕ್ಕೆ ದಾಸವಾಳ**

ಕೂದಲಿನ ಆರೈಕೆಯಲ್ಲಿ ದಾಸವಾಳದ ಬಳಕೆಗೆ ಭಾರತೀಯ ಮನೆಮದ್ದು ಪದ್ಧತಿಯಲ್ಲಿ ದೀರ್ಘ ಪರಂಪರೆಯಿದೆ. ದಾಸವಾಳದ ಹೂವು ಮತ್ತು ಎಲೆಗಳನ್ನು ಅರೆದು ಪೇಸ್ಟ್ ಮಾಡಿ, ಕೆಲವರು ಅದನ್ನು ಕೂದಲಿಗೆ ಹಚ್ಚುತ್ತಾರೆ. ಕೆಲವು ಮನೆಗಳಲ್ಲಿ ದಾಸವಾಳವನ್ನು ತೆಂಗಿನೆಣ್ಣೆಯೊಂದಿಗೆ ಸೇರಿಸಿ ಸಾಂಪ್ರದಾಯಿಕ ಕೂದಲು ಆರೈಕೆಯಾಗಿ ಬಳಸುವ ಪದ್ಧತಿಯೂ ಇದೆ. ದಾಸವಾಳದ ಎಲೆಗಳಲ್ಲಿ ಕಂಡುಬರುವ ಜಿಗುಟಾದ ಸಸ್ಯಜನ್ಯ ಅಂಶಗಳು ಕೂದಲಿನ ಆರೈಕೆಯಲ್ಲಿ ಬಳಸಲು ಅನುಕೂಲಕರವಾಗಿವೆ ಎಂದು ಪರಂಪರೆಯಿಂದ ನಂಬಲಾಗಿದೆ.

ಇಂತಹ ಮನೆಮದ್ದುಗಳನ್ನು ಬಳಸುವಾಗ ಚರ್ಮದ ಸೂಕ್ಷ್ಮತೆ ಇರುವವರು ಮೊದಲು ಸಣ್ಣ ಭಾಗದಲ್ಲಿ ಪರೀಕ್ಷಿಸಿ, ಯಾವುದೇ ಅಸಹಜ ಪ್ರತಿಕ್ರಿಯೆ ಕಂಡುಬಂದರೆ ಬಳಕೆ ನಿಲ್ಲಿಸುವುದು ಉತ್ತಮ.

**ಚಿಟ್ಟೆ ಮತ್ತು ಪರಾಗಸ್ಪರ್ಶಕ ಜೀವಿಗಳ ಸ್ನೇಹಿತ**

ಹೂವಿನ ಸಸ್ಯಗಳು ಕೇವಲ ಮನುಷ್ಯರ ಕಣ್ಣಿಗೆ ಸೌಂದರ್ಯ ನೀಡುವುದಲ್ಲ. ಅವು ಪ್ರಕೃತಿಯ ಆಹಾರ ಸರಪಳಿಯಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತವೆ. ದಾಸವಾಳದ ಹೂವುಗಳು ವಿವಿಧ ಕೀಟಗಳು ಮತ್ತು ಪರಾಗಸ್ಪರ್ಶಕ ಜೀವಿಗಳನ್ನು ಆಕರ್ಷಿಸಬಹುದು. ಜೇನುನೊಣಗಳು, ಚಿಟ್ಟೆಗಳು ಮತ್ತು ಇತರ ಕೀಟಗಳು ಹೂವಿನ ಸುತ್ತಮುತ್ತ ಸಂಚರಿಸುವ ದೃಶ್ಯ ಮನೆಯ ತೋಟಕ್ಕೆ ಜೀವಂತಿಕೆಯನ್ನು ನೀಡುತ್ತದೆ. ಹೀಗಾಗಿ ಒಂದು ದಾಸವಾಳದ ಗಿಡ ಬೆಳೆಸುವುದು ಎಂದರೆ ಕೇವಲ ಒಂದು ಹೂವಿನ ಗಿಡ ಬೆಳೆಸುವುದಲ್ಲ; ಮನೆಯ ಸುತ್ತಲಿನ ಸಣ್ಣ ಜೀವವೈವಿಧ್ಯಕ್ಕೂ ಒಂದು ಅವಕಾಶ ನೀಡುವುದಾಗಿದೆ.

**ಪರಿಸರದೊಂದಿಗೆ ನಮ್ಮ ಸಂಬಂಧ**

ಇಂದು ಪರಿಸರ ಸಂರಕ್ಷಣೆ ಕುರಿತು ದೊಡ್ಡ ದೊಡ್ಡ ಮಾತುಗಳನ್ನು ಆಡುತ್ತಿದ್ದೇವೆ. ಆದರೆ ಪರಿಸರ ಸಂರಕ್ಷಣೆಯ ಆರಂಭ ನಮ್ಮ ಮನೆಯ ಅಂಗಳದಿಂದಲೇ ಆಗಬೇಕು. ಒಂದು ಮರ ನೆಡುವುದು, ಒಂದು ಹೂವಿನ ಗಿಡ ಬೆಳೆಸುವುದು, ಮನೆಯ ಸುತ್ತಮುತ್ತ ಹಸಿರನ್ನು ಉಳಿಸುವುದು?ಇವೆಲ್ಲವೂ ಪರಿಸರದ ಮೇಲಿನ ನಮ್ಮ ಜವಾಬ್ದಾರಿಯ ಸಣ್ಣ ಹೆಜ್ಜೆಗಳಾಗಿವೆ. ದಾಸವಾಳದಂತಹ ಗಿಡಗಳು ಮನೆಯ ಸುತ್ತಮುತ್ತ ಹಸಿರನ್ನು ಹೆಚ್ಚಿಸುವುದರ ಜೊತೆಗೆ ಪ್ರಕೃತಿಯ ಸೌಂದರ್ಯವನ್ನು ಕಣ್ಣಿಗೆ ಕಟ್ಟಿಕೊಡುತ್ತವೆ. ಮಕ್ಕಳಿಗೆ ಸಸ್ಯಗಳ ಬಗ್ಗೆ ತಿಳಿಸುವುದಕ್ಕೂ ಇಂತಹ ಕೈತೋಟಗಳು ಉತ್ತಮ ಅವಕಾಶ.

**ದಾಸವಾಳದ ಜೀವನಚಕ್ರವೂ ಒಂದು ಪಾಠ**

ದಾಸವಾಳದ ಹೂವು ನಮಗೆ ಜೀವನದ ಒಂದು ಸುಂದರ ಸತ್ಯವನ್ನು ನೆನಪಿಸುತ್ತದೆ. ಬೆಳಿಗ್ಗೆ ಅರಳುವ ಹೂವು ತನ್ನ ಸೌಂದರ್ಯವನ್ನು ಸಂಪೂರ್ಣವಾಗಿ ವ್ಯಕ್ತಪಡಿಸುತ್ತದೆ. ಕೆಲವು ಸಮಯದ ನಂತರ ಅದು ಬಾಡುತ್ತದೆ. ಆದರೆ ಗಿಡ ಅಲ್ಲಿಯೇ ನಿಲ್ಲುವುದಿಲ್ಲ. ಮತ್ತೆ ಹೊಸ ಮೊಗ್ಗು ಮೂಡುತ್ತದೆ. ಹೊಸ ಹೂವು ಅರಳುತ್ತದೆ. ಮನುಷ್ಯನ ಜೀವನವೂ ಇದೇ ರೀತಿಯದ್ದು. ಒಂದು ದಿನದ ಸೋಲು ಜೀವನದ ಅಂತ್ಯವಲ್ಲ. ಒಂದು ಅವಕಾಶ ಕೈತಪ್ಪಿದರೆ ಮತ್ತೊಂದು ಅವಕಾಶ ಬರಬಹುದು. ಒಂದು ಹಂತದಲ್ಲಿ ಎದುರಾದ ಕಷ್ಟ ಮುಂದಿನ ಹಂತದ ಯಶಸ್ಸಿಗೆ ಪಾಠವಾಗಬಹುದು.

ಬಾಡಿದ ಹೂವಿನ ಜಾಗದಲ್ಲಿ ಹೊಸ ಹೂವು ಅರಳುವಂತೆ, ಕಳೆದುಹೋದ ದಿನಗಳ ನಂತರವೂ ಬದುಕಿನಲ್ಲಿ ಹೊಸ ಆರಂಭ ಸಾಧ್ಯ ಎಂಬ ಸಂದೇಶವನ್ನು ದಾಸವಾಳ ನಮಗೆ ನೀಡುತ್ತದೆ.

**ದಾಸವಾಳ ಸರಳತೆಯಲ್ಲಿರುವ ಅದ್ಭುತ**

ದಾಸವಾಳಕ್ಕೆ ದುಬಾರಿ ಬೆಲೆ ಇಲ್ಲ. ಅದನ್ನು ಬೆಳೆಸಲು ದೊಡ್ಡ ಜಾಗದ ಅಗತ್ಯವೂ ಇಲ್ಲ. ಆದರೆ ಅದು ಅರಳಿದಾಗ ನೀಡುವ ಸಂತೋಷಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಒಂದು ಪುಟ್ಟ ಗಿಡದಲ್ಲಿ ಅರಳುವ ಒಂದು ಹೂವು ಮನೆಯ ವಾತಾವರಣವನ್ನು ಬದಲಾಯಿಸಬಲ್ಲದು. ಬೆಳಗಿನ ಜಾವ ಅದರತ್ತ ಒಮ್ಮೆ ದೃಷ್ಟಿ ಹಾಯಿಸಿದರೂ ಮನಸ್ಸಿನಲ್ಲಿ ಹೊಸತನ ಮೂಡುತ್ತದೆ. ಇದೇ ಪ್ರಕೃತಿಯ ಶಕ್ತಿ. ಪ್ರಕೃತಿ ಯಾವಾಗಲೂ ದೊಡ್ಡದನ್ನೇ ಕೊಟ್ಟು ಸಂತೋಷಪಡಿಸುವುದಿಲ್ಲ. ಕೆಲವೊಮ್ಮೆ ಒಂದು ಹೂವು, ಒಂದು ಎಲೆ, ಒಂದು ಹಕ್ಕಿಯ ಚಿಲಿಪಿಲಿ, ಒಂದು ತಂಪಾದ ಗಾಳಿ?ಇಷ್ಟೇ ಸಾಕಾಗುತ್ತದೆ.

**ಮಕ್ಕಳಿಗೆ ಪ್ರಕೃತಿಯ ಪಾಠ ಕಲಿಸುವ ಗಿಡ**

ಇಂದಿನ ಮಕ್ಕಳು ಮೊಬೈಲ್, ಟಿವಿ ಮತ್ತು ಡಿಜಿಟಲ್ ಜಗತ್ತಿನಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಮನೆಯ ಸಣ್ಣ ಕೈತೋಟವೂ ಮಕ್ಕಳಿಗೆ ಪ್ರಕೃತಿಯೊಂದಿಗೆ ಬೆರೆಯುವ ಅವಕಾಶ ನೀಡುತ್ತದೆ.

ದಾಸವಾಳದ ಗಿಡವನ್ನು ಮಕ್ಕಳೊಂದಿಗೆ ನೆಟ್ಟು, ಪ್ರತಿದಿನ ಅದಕ್ಕೆ ನೀರು ಹಾಕಿಸಿ, ಹೊಸ ಮೊಗ್ಗು ಹೇಗೆ ಬರುತ್ತದೆ, ಹೂವು ಹೇಗೆ ಅರಳುತ್ತದೆ, ನಂತರ ಹೇಗೆ ಬಾಡುತ್ತದೆ ಎಂಬುದನ್ನು ತೋರಿಸಬಹುದು. ಇದರಿಂದ ಮಕ್ಕಳಲ್ಲಿ ಸಸ್ಯಗಳ ಬಗ್ಗೆ ಪ್ರೀತಿ, ಪರಿಸರದ ಬಗ್ಗೆ ಜವಾಬ್ದಾರಿ ಮತ್ತು ಪ್ರಕೃತಿಯ ಬಗ್ಗೆ ಕುತೂಹಲ ಬೆಳೆಯುತ್ತದೆ.

**ದಾಸವಾಳದ ಆರೈಕೆ ಹೇಗೆ**

ದಾಸವಾಳ ಗಿಡಕ್ಕೆ ಸಾಮಾನ್ಯವಾಗಿ ಉತ್ತಮ ಸೂರ್ಯನ ಬೆಳಕು ಅಗತ್ಯವಿರುತ್ತದೆ. ಮಣ್ಣಿನಲ್ಲಿ ನೀರು ನಿಂತುಕೊಳ್ಳದಂತೆ ನೋಡಿಕೊಳ್ಳಬೇಕು. ನಿಯಮಿತವಾಗಿ ನೀರು ಹಾಕಬೇಕು. ಸಸ್ಯದ ಬೆಳವಣಿಗೆಗೆ ಅನುಗುಣವಾಗಿ ಸಾವಯವ ಗೊಬ್ಬರ ಅಥವಾ ಸೂಕ್ತ ಪೋಷಕಾಂಶಗಳನ್ನು ನೀಡಬಹುದು. ಹೂವುಗಳು ಚೆನ್ನಾಗಿ ಅರಳಲು ಗಿಡವನ್ನು ಸರಿಯಾದ ಸಮಯದಲ್ಲಿ ಕತ್ತರಿಸಿ ಆಕಾರ ನೀಡುವುದು ಸಹಾಯಕವಾಗಬಹುದು. ಒಣಗಿದ ಅಥವಾ ಹಾನಿಗೊಳಗಾದ ಕೊಂಬೆಗಳನ್ನು ತೆಗೆದುಹಾಕುವುದರಿಂದ ಹೊಸ ಬೆಳವಣಿಗೆಗೆ ಅವಕಾಶ ಸಿಗುತ್ತದೆ. ಕೀಟಬಾಧೆ ಕಂಡುಬಂದರೆ ತೋಟಗಾರಿಕೆ ತಜ್ಞರ ಸಲಹೆಯೊಂದಿಗೆ ಸೂಕ್ತ ಕ್ರಮ ಕೈಗೊಳ್ಳುವುದು ಉತ್ತಮ.

**ಹೂವಿನಾಚೆಗಿನ ಒಂದು ದೊಡ್ಡ ಸಂದೇಶ**

ದಾಸವಾಳ ಹೂವು ನಮಗೆ ಒಂದು ಪ್ರಮುಖ ಸಂದೇಶ ನೀಡುತ್ತದೆ?ನಮ್ಮ ಸುತ್ತಲಿರುವ ಸಣ್ಣ ಸೌಂದರ್ಯವನ್ನು ಗಮನಿಸುವುದನ್ನು ಕಲಿಯಬೇಕು. ಜೀವನದ ಓಟದಲ್ಲಿ ನಾವು ದೊಡ್ಡ ಯಶಸ್ಸು, ಹಣ, ಸ್ಥಾನಮಾನ ಮತ್ತು ಹೆಸರುಗಳ ಹಿಂದೆ ಓಡುತ್ತೇವೆ. ಆದರೆ ಮನೆಯ ಅಂಗಳದಲ್ಲಿ ಅರಳಿರುವ ಒಂದು ಹೂವನ್ನು ಗಮನಿಸಲು ಸಮಯವಿರುವುದಿಲ್ಲ.

ಪ್ರಕೃತಿ ಮಾತ್ರ ಯಾವುದೇ ಪ್ರತಿಫಲವನ್ನು ಕೇಳದೆ ತನ್ನ ಕೆಲಸ ಮಾಡುತ್ತಲೇ ಇರುತ್ತದೆ. ದಾಸವಾಳವೂ ಹಾಗೆಯೇ. ಅದು ಅರಳುತ್ತದೆ, ತನ್ನ ಸೌಂದರ್ಯವನ್ನು ಹಂಚುತ್ತದೆ, ಬಾಡುತ್ತದೆ ಮತ್ತು ಮತ್ತೆ ಹೊಸ ಹೂವಿಗೆ ದಾರಿ ಮಾಡಿಕೊಡುತ್ತದೆ.

**ಕೊನೆಯ ಮಾತು**

ದಾಸವಾಳ ಹೂವು ನೋಡಲು ಸುಂದರವಾದ ಹೂವು ಮಾತ್ರವಲ್ಲ. ಅದು ಭಾರತೀಯ ಸಂಸ್ಕೃತಿಯೊಂದಿಗೆ ಬೆಸೆದುಕೊಂಡಿರುವ ಹೂವು. ಪೂಜೆಯಲ್ಲಿ ಸ್ಥಾನ ಪಡೆದಿರುವ ಹೂವು. ಮನೆಯ ಅಂಗಳವನ್ನು ಅಲಂಕರಿಸುವ ಹೂವು. ಸಾಂಪ್ರದಾಯಿಕ ಕೂದಲು ಆರೈಕೆಯಲ್ಲಿ ಬಳಕೆಯಾಗುವ ಸಸ್ಯ. ಪರಾಗಸ್ಪರ್ಶಕ ಜೀವಿಗಳನ್ನು ಆಕರ್ಷಿಸುವ ಪ್ರಕೃತಿಯ ಒಂದು ಭಾಗ. ಅದಕ್ಕಿಂತ ಮುಖ್ಯವಾಗಿ, ಜೀವನದ ಏರುಪೇರುಗಳನ್ನು ಅರ್ಥಮಾಡಿಕೊಳ್ಳಲು ನಮಗೆ ಒಂದು ಸುಂದರ ರೂಪಕ. ಒಂದು ದಾಸವಾಳದ ಗಿಡ ನೆಡಿ... ಒಂದು ಹೂವನ್ನು ಬೆಳೆಸಿ...
ಪ್ರಕೃತಿಯನ್ನು ಹತ್ತಿರವಾಗಿಸಿಕೊಳ್ಳಿ.

**ಯಾಕೆಂದರೆ,**

"ಹೂವು ಅರಳುವುದು ಪ್ರಕೃತಿಯ ಸೌಂದರ್ಯ; ಅದನ್ನು ಗಮನಿಸುವುದು ಮನುಷ್ಯನ ಸೌಂದರ್ಯ."

ವಿನಾಯಕ ಬಿ. ತಿಪ್ಪಣ್ಣನವರ

1ನೇ ಪುಟದಿಂದ....

## ಜಲ ಮೂಲಗಳ ಪುನಶ್ಚೇತನಕ್ಕೆ ವಿಬಿಜಿ ರಾಮ್‌ಜಿ ಬಲ

ಎರಡು ಬಾರಿ ಹಾಜರಾತಿ ಅಳವಡಿಸಬೇಕು ಎಂದು ತಿಳಿಸಿದರು. ಅಂತೂರ- ಬೆಂತೂರ ಗ್ರಾಮದ ಬೂದೀಶ್ವರ ಸಂಸ್ಥಾನ ಮಠದ ಡಾ. ರಾಚೋಟೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರು ಭೂಮಿ ಪೂಜೆ ನೆರವೇರಿಸಿ ಕೆರೆ ಹೂಳೆತ್ತುವ ಕಾರ್ಯಕ್ಕೆ ಚಾಲನೆ ನೀಡಿದರು. ಗ್ರಾಪಂ ಮಾಜಿ ಅಧ್ಯಕ್ಷ ಪ್ರಕಾಶಗೌಡ ಪಾಟೀಲ, ಕಾರ್ಯದರ್ಶಿ ಶಾಂತಯ್ಯ ಪ್ರಭಯ್ಯನಮಠ, ಟಿಎಇ ಪ್ರದೀಪ್ ನರೇಗಲ್ಲ, ಗ್ರಾಪಂ ಸಿಬ್ಬಂದಿಯಾದ ಮಹಾತೇಶ ಮಜ್ಜಿಗುಡ್ಡ, ಅಶೋಕ ಜಿನಗಿ, ಬಿಎಫ್‌ಟಿ ದಾವಲಸಾಬ್ ಚಲ್ಲಮರದ, ಕಾಯಕ ಬಂಧುಗಳು, ಕೂಲಿಕಾರರು ಇತರರಿದ್ದರು.

## ನಾಳೆಯಿಂದ ವಿಧಾನಮಂಡಲ ಅಧಿವೇಶನ ಹಿನ್ನೆಲೆಯಲ್ಲಿ ವಿಧಾನಸೌಧದ ಸುತ್ತ ನಿಷೇಧಾಜ್ಞೆ

ಬೆಂಗಳೂರು: ವಿಧಾನ ಸಭೆ ಮತ್ತು ವಿಧಾನ ಪರಿಷತ್ ಅಧಿವೇಶನ ಆ.13 ರಿಂದ 27 ರವರೆಗೆ ನಡೆಯಲಿರುವ ಹಿನ್ನಲೆಯಲ್ಲಿ ವಿಧಾನಸೌಧದ ಸುತ್ತಲು 2ಕಿ.ಮೀ ವ್ಯಾಪ್ತಿಯಲ್ಲಿ ನಗರ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್ ನಿಷೇಧಾಜ್ಞೆ ಜಾರಿ ಮಾಡಿದ್ದಾರೆ.



ಈ ಸಂದರ್ಭದಲ್ಲಿ ವಿವಿಧ ರಾಜಕೀಯ ಪಕ್ಷಗಳು ಮತ್ತು ವಿವಿಧ ಸಂಘಟನೆಗಳು ತಮ ಬೇಡಿಕೆಗಳಿಗೆ ಒತ್ತಾಯಿಸಿ ಪ್ರತಿಭಟನೆ, ಧರಣಿ, ವಿಧಾನಸೌಧ ಮುತ್ತಿಗೆ ಕಾರ್ಯಕ್ರಮಗಳನ್ನು ಹಮಿಕೊಳ್ಳುವ ಸಾಧ್ಯತೆ ಇರುತ್ತದೆ. ಹಾಗಾಗಿ ಅಧಿವೇಶನ ಕಾರ್ಯ ಕಲಾಪಗಳಿಗೆ ಅಡಚಣೆ ಉಂಟಾಗು ವುದಲ್ಲದೇ ಸಾರ್ವಜನಿಕ ನೆಮದಿಗೆ ಭಂಗ ಹಾಗೂ ಸುಮಗ ಸಂಚಾರಕ್ಕೆ ತೊಂದರೆ ಉಂಟಾಗುವ ಸಾಧ್ಯತೆ ಇರುವುದರಿಂದ ವಿಧಾನ ಸೌಧದ ಸುತ್ತ ನಿಷೇಧಾಜ್ಞೆ ಹೊರಡಿಸಲಾಗಿದೆ. ಆ.15 ರಂದು ವಿಧಾನ ಸೌಧದಲ್ಲಿ ಫ್ರೀಡಂ ಹಬ್ಬದ ಸಂಭ್ರಮಾಚರಣೆ ಕಾರ್ಯಕ್ರಮ ಹೊರತುಪಡಿಸಿ ನಿಷೇಧಾಜ್ಞೆ ವಿಧಿಸಲಾಗಿದೆ ಎಂದು ಅವರು ಪ್ರತಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜನಶ್ರೀ ಟೈಮ್ಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಆ.29ರಂದು ಅಮೆರಿಕದಲ್ಲಿ ಮೋಹನ್ ಭಾಗವತ್ ಭಾಷಣ

ನವದೆಹಲಿ: ನೂರು ವರ್ಷದ ಜಾಗತಿಕ ಸಂಪರ್ಕ ಅಭಿಯಾನದ ಭಾಗವಾಗಿ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಆ.29ರಂದು ನ್ಯೂಯಾರ್ಕ್‌ನ ಪ್ರತಿಷ್ಠಿತ ಮ್ಯಾಡಿಸನ್ ಸ್ಕ್ವೇರ್ ಗಾರ್ಡನ್‌ನಲ್ಲಿ ಅನಿವಾಸಿ ಭಾರತೀಯರನ್ನು ಉದ್ದೇಶಿಸಿ ಅವರು ಭಾಷಣ ಮಾಡಲಿದ್ದಾರೆ. ಅಮೆರಿಕನ್ ಹಿಂದೂಸ್ ಫಾರ್ ಎಂಗೇಜ್‌ಮೆಂಟ್ ಅಂಡ್ ಡೈಲಾಗ್ ಫೋರಂ ಮತ್ತು ನೂರಾರು ಹಿಂದೂ ಸಾಂಸ್ಕೃತಿಕ, ಧಾರ್ಮಿಕ ಸಂಸ್ಥೆಗಳ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಆಗಸ್ಟ್ 29 ರಂದು ನಡೆಯಲಿರುವ ಈ ಬೃಹತ್ ಸಮಾವೇಶಕ್ಕೆ ಯುನಿವರ್ಸಲ್ ಒನ್ನೆಸ್ ಸೆಲೆಬ್ರೇಷನ್ಸ್‌ಎಂದು ಹೆಸರಿಸಲಾಗಿದೆ. ಹಿಂದೂ



ಹಬ್ಬವಾದ ರಕ್ಷಾಬಂಧನದ ಸಂದರ್ಭದಲ್ಲೇ ಈ ಕಾರ್ಯಕ್ರಮ ಆಯೋಜನೆಗೊಂಡಿರುವುದು ವಿಶೇಷವಾಗಿದೆ. ಈ ಸಮಾವೇಶವು ಪ್ರಮುಖವಾಗಿ ವಸುಧೈವ ಕುಟುಂಬಕಂ, ಅಂದರೆ ಇಡೀ ಜಗತ್ತೇ ಒಂದು ಕುಟುಂಬ ಎಂಬ ಭಾರತೀಯ ಸನಾತನ ತತ್ವದ ಆಧಾರದ ಮೇಲೆ ಜಾಗತಿಕ ಸಾಮರಸ್ಯ, ನಾಗರಿಕ ಜವಾಬ್ದಾರಿ ಮತ್ತು ಪರಸ್ಪರ ಗೌರವದ ಸಂದೇಶವನ್ನು ಸಾರಲಾಗುತ್ತದೆ. ಸಹೋದರ-ಸಹೋದರಿಯರ ಬಾಂಧವ್ಯದ ಹಬ್ಬವಾದ ರಕ್ಷಾಬಂಧನವನ್ನು ಇಡೀ ಜಗತ್ತು, ಮಾನವೀಯತೆ ಮತ್ತು ಪ್ರಕೃತಿಯ ನಡುವಿನ ಜವಾಬ್ದಾರಿಯ ಸಂಕೇತವಾಗಿ ಇಲ್ಲಿ ಪ್ರಸ್ತುತಪಡಿಸಲಾಗುತ್ತಿದೆ. ಮೋಹನ್ ಭಾಗವತ್ ಅವರ ಈ ಅಪರೂಪದ ಅಮೆರಿಕ ಸಾರ್ವಜನಿಕ ಭಾಷಣವನ್ನು ಕೇಳಲು ಅಮೆರಿಕದ ವಿವಿಧ ರಾಜ್ಯಗಳಿಂದ 5,000ಕ್ಕೂ ಹೆಚ್ಚು ಪ್ರಮುಖ ಭಾರತೀಯ ಮೂಲದ ಅಮೆರಿಕನ್ನರು ಭಾಗವಹಿಸುವ ನಿರೀಕ್ಷೆಯಿದೆ. ಈ ಕಾರ್ಯಕ್ರಮದಲ್ಲಿ ವಿವಿಧ ಭಾಷಾ, ಪ್ರಾದೇಶಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯ ಉದ್ಯಮಿಗಳು, ವೈದ್ಯರು, ಶಿಕ್ಷಣ ತಜ್ಞರು, ಯುವ ಮುಖಂಡರು ಮತ್ತು ಧಾರ್ಮಿಕ ಮುಖಂಡರು ಪಾಲ್ಗೊಳ್ಳಲಿದ್ದಾರೆ. ನ್ಯೂಯಾರ್ಕ್‌ನಲ್ಲಿ ಕನಿಷ್ಠ ಎರಡು ಖಾಸಗಿ ಕಾರ್ಯಕ್ರಮಗಳಲ್ಲೂ ಭಾಗವಹಿಸಲಿರುವ ಮೋಹನ್ ಭಾಗವತ್ ಅವರು, ಅಮೆರಿಕದ ಪ್ರವಾಸ ಮುಗಿದ ನಂತರ ಕೆನಡಾಕ್ಕೂ ಭೇಟಿ ನೀಡುವ ಸಾಧ್ಯತೆಯಿದೆ. ಆರ್‌ಎಸ್‌ಎಸ್ ಜಗತ್ತಿನಾದ್ಯಂತ ತನ್ನ ಒಡನಾಟವನ್ನು ವೃದ್ಧಿಸಿಕೊಳ್ಳಲು ಹಮ್ಮಿಕೊಂಡಿರುವ ಶತಮಾನೋತ್ಸವದ ಜಾಗತಿಕ ಕಾರ್ಯತಂತ್ರದ ಭಾಗವಾಗಿ ಈ ವಿದೇಶಿ ಪ್ರವಾಸಗಳು ಅತ್ಯಂತ ಮಹತ್ವ ಪಡೆದುಕೊಂಡಿವೆ.

## ಸರ್ಕಾರೀ ಅಧಿಕಾರಿಗಳೊಂದಿಗೆ ಸಿಎಂ ಡಿಕೆಶಿ ವಿಡಿಯೋ ಕಾನ್ಫರೆನ್ಸ್

ಬೆಂಗಳೂರು: ಬರ ನಿರ್ವಹಣೆ ಹಾಗೂ ಜನಪರ ಆಡಳಿತ ಕುರಿತಂತೆ ಸರ್ಕಾರಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಸ್ಪಷ್ಟ ನಿರ್ದೇಶನ ನೀಡಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದು ವೀಡಿಯೋ ಕಾನ್ಫರೆನ್ಸ್ ಸಭೆ ನಡೆಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದ ಮೂಲಕ ಡಿ.ಕೆ.ಶಿವಕುಮಾರ್ ಅವರು ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿಗಳ ಜೊತೆ ಸಂವಾದ ನಡೆಸಿದರು.ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿ ಗಳು ಉಪಸ್ಥಿತರಿದ್ದರು.

ಜಿಲ್ಲಾ ಕೇಂದ್ರಗಳಿಂದ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿ ಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳು, ಜಿಲ್ಲೆ, ತಾಲ್ಲೂಕು, ಹೊಬಳ್ಳಿ ಗ್ರಾಮ ಮಟ್ಟದಿಂದ ಅಧಿಕಾರಿ, ಸಿಬ್ಬಂದಿಗಳು ಆಯಾ ಸ್ಥಳಗಳಿಂದಲೇ ವೀಡಿಯೋ ಕಾನ್ಫರೆನ್ಸ್ ಮೂಲಕ ಮುಖ್ಯಮಂತ್ರಿಯವರೊಂದಿಗೆ ಸಂವಾದ ನಡೆಸಿದರು. ಈವರೆಗೂ ಡಿ.ಕೆ.ಶಿವಕುಮಾರ್ ಅವರು ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರ ಜೊತೆ ಮೂರು ಬಾರಿ ಸಭೆ ನಡೆಸಿದ್ದಾರೆ. ಜಿಲ್ಲಾಧಿಕಾರಿಗಳು, ಸಿಇಓ ಜೊತೆ ಮೊನ್ನೆ ನೇರವಾಗಿ ಎರಡು ಬಾರಿ ವರ್ಚ್ಯುವಲ್ ಮೂಲಕ ಚರ್ಚೆ ನಡೆಸಿದ್ದಾರೆ.ಇದೇ ಮೊದಲ ಬಾರಿಗೆ ಕೆಳ ಹಂತದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಜೊತೆಗೂ ಮುಖ್ಯಮಂತ್ರಿಯವರು ಸಂವಾದ ನಡೆಸುವ ಮೂಲಕ ಆಡಳಿತ ಸುಧಾರಣೆಗೆ ಒಂದು ಹೆಜ್ಜೆ ಮುಂದಿಟ್ಟಿದ್ದಾರೆ.

ರಾಜ್ಯ ಸರ್ಕಾರದ ಪಂಚಖಾತ್ರಿ ಯೋಜನೆಗಳು ಮಹತ್ವಕಾಂಕ್ಷಿ ಯಿಂದ ಕೂಡಿವೆ. ಅವು ಅರ್ಹರಿಗೂ ತಲುಪಬೇಕು. ಅನರ್ಹರನ್ನು ಗುರುತಿಸಿ ಸಮರ್ಪಕ ದಾಖಲೆಗಳ ಮೂಲಕ ಸೌಲಭ್ಯ ಪಡೆಯದಂತೆ ಮನವರಿಕೆ ಮಾಡಿಕೊಡಬೇಕು ಎಂದು ಮುಖ್ಯಮಂತ್ರಿ ಸಲಹೆ ನೀಡಿದ್ದಾರೆ. ಬರ ಪರಿಸ್ಥಿತಿ ಸಂದರ್ಭದಲ್ಲಿ ಜನರ




ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಬೇಕು. ಕುಡಿಯುವ ನೀರು, ಮೇವು, ಉದ್ಯೋಗದ ಸಮಸ್ಯೆಗಳಾಗದಂತೆ ಕಾಳಜಿವಹಿಸಬೇಕು. ಗ್ರಾಮೀಣ ಭಾಗದಲ್ಲಿ ಉದ್ಯೋಗ ಸೃಷ್ಟಿಗೆ ವಿಬಿ-ಜಿರಾಮ್‌ಜಿ ಯೋಜನೆಯನ್ನು ಸಮರ್ಪಕ ವಾಗಿ ಬಳಸಿಕೊಳ್ಳಬೇಕು. ಕೆಲವು ಜಿಲ್ಲೆಗಳಲ್ಲಿ ಉದ್ಯೋಗ ಸೃಷ್ಟಿಯಾಗದೆ, ಜನರು ಬೇರೆ ಕಡೆಗೆ ವಲಸೆ ಹೋಗುತ್ತಿರುವುದು ಕಂಡು ಬರುತ್ತಿದೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಉದ್ಯೋಗ ಸೃಷ್ಟಿಸದ ಪಿಡಿಒಗಳ ವಿರುದ್ಧ ಕಠಿಣಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಲಾಗಿದೆ. ಸಾರ್ವಜನಿಕರ ದಾಖಲೆ ಪತ್ರಗಳ ವಿತರಣೆಯಲ್ಲಿ ವಿಳಂಬ ಮಾಡಬಾರದು. ಭ್ರಷ್ಟಾಚಾರಕ್ಕೆ ಯಾವುದೇ ರೀತಿಯ ಆಸ್ಪದ ಇರುವುದಿಲ್ಲ ಎಂದು ಮುಖ್ಯಮಂತ್ರಿ ಸ್ಪಷ್ಟ ನಿರ್ದೇಶನ ನೀಡಿದ್ದಾರೆ.

ಕೆಲವು ಜಿಲ್ಲೆಗಳ ಅಧಿಕಾರಿಗಳ ಜೊತೆ ಮಾತುಕತೆ ನಡೆಸಿ ಸ್ಥಳೀಯ ಸಮಸ್ಯೆಗಳ ಬಗ್ಗೆ ವಿವರಣೆ ಪಡೆದುಕೊಂಡಿದ್ದಾರೆ.

1ನೇ ಪುಟದಿಂದ....

## ಸರ್ಕಾರಿ ನೌಕರರೊಂದಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಂವಾದ ಅಧಿಕಾರಿಗಳು ಹಾಗೂ ನೌಕರರು ಸರ್ಕಾರದ ಬೆನ್ನೆಲುಬು

# ಜನಸೇವೆಯೇ ಸರ್ಕಾರದ ಮೂಲ ಆಶಯ

ಪ್ರತಿಯೊಬ್ಬ ಅಧಿಕಾರಿಯೂ ತಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ, ನಿಸ್ವಾರ್ಥವಾಗಿ ಜನಸೇವೆ ಮಾಡಬೇಕೆಂದು ಅವರು ತಿಳಿಸಿದರು. ಭ್ರಷ್ಟಾಚಾರಕ್ಕೆ ಶೂನ್ಯ ಸಹಿಷ್ಣುತೆ: ಸರ್ಕಾರದ ಕೆಲಸ ಕಾರ್ಯಗಳಲ್ಲಿ ಯಾವುದೇ ಕಾರಣಕ್ಕೂ ಭ್ರಷ್ಟಾಚಾರವನ್ನು ಸಹಿಸುವುದಿಲ್ಲ. ಎಸ್ಪಿ, ತಹಶೀಲ್ದಾರ್ ಹಾಗೂ ಕಮಿಷನರ್ ಮಟ್ಟದ ಅಧಿಕಾರಿಗಳಿಂದ ಹಿಡಿದು ಕೆಳಹಂತದ ಸಿಬ್ಬಂದಿಯವರೆಗೆ ಎಲ್ಲರ ಕೆಲಸವನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ. ಪ್ರತಿಯೊಂದು ಕಾಮಗಾರಿ ಹಾಗೂ ಯೋಜನೆಗಳ ಪಾರದರ್ಶಕತೆಗೆ ತಂತ್ರಜ್ಞಾನವನ್ನು ಬಳಸಬೇಕು. ಫಲಾನುಭವಿಗಳ ಆಧಾರ್, ಫೋಟೋ, ವಿಡಿಯೋ ಆಧರಿತ ದಾಖಲೆಗಳನ್ನು ನಮೂದಿಸಬೇಕು. ರಾಜ್ಯಾದ್ಯಂತ ಪಿಡಬ್ಲ್ಯುಡಿ, ಬಿಬಿಎಂಪಿ ಮತ್ತು ಮಹಾನಗರ ಪಾಲಿಕೆಗಳ ವ್ಯಾಪ್ತಿಯ ಎಲ್ಲ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲ್ ರೂಪಕ್ಕೆ ತರಲಾಗುತ್ತಿದೆ ಎಂದರು. ಅಧಿಕಾರಿಗಳ ಚಲನವಲನದ ಮೇಲೆ ಕಣ್ಣು: ತಾಲೂಕು ಮತ್ತು ಗ್ರಾಮ ಮಟ್ಟದ ಅಧಿಕಾರಿಗಳು, ಪಿಡಿಒ, ತಹಶೀಲ್ದಾರ್ ಹಾಗೂ ಇತರ ಇಲಾಖೆಯ ಸಿಬ್ಬಂದಿಯ ಭೇಟಿಯ ಸಮಯ ಹಾಗೂ ಚಟುವಟಿಕೆಗಳನ್ನು ಹಿರಿಯ ಅಧಿಕಾರಿಗಳು ಪರಿಶೀಲಿಸುವ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತಿದೆ. ಸ್ಥಳೀಯ ಮಟ್ಟದಲ್ಲಿ ಸರ್ಕಾರಿ ಶಾಲೆಗಳು, ಆಸ್ಪತ್ರೆಗಳು ಹಾಗೂ ಆಶ್ರಮಗಳಿಗೆ ಅಧಿಕಾರಿಗಳು ಭೇಟಿ ನೀಡಿ ಅಲ್ಲಿನ ಮೂಲಸೌಕರ್ಯ, ಬಿಸಿಊಟ ಮತ್ತು ನಿರ್ವಹಣೆಯನ್ನು ಪರಿಶೀಲಿಸಬೇಕು ಎಂದು ನಿರ್ದೇಶನ ನೀಡಿದರು. ಮುಂಬರುವ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಸರ್ಕಾರಿ ಶಾಲೆಗಳ ಜೊತೆಗೆ ಎಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಸಹ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಬಿಇಒ ಹಾಗೂ ಡಿಡಿಪಿಐಗಳು ಕ್ರಮ ವಹಿಸಬೇಕು ಎಂದರು. ನಾವೆಲ್ಲರೂ 'ಟೀಮ್ ಕರ್ನಾಟಕ'ವಾಗಿ ಕೆಲಸ ಮಾಡಬೇಕಿದೆ. ಪ್ರತಿಯೊಬ್ಬ ಸರ್ಕಾರಿ ನೌಕರನೂ ಜವಾಬ್ದಾರಿಯಿಂದ ಜನರ ಸೇವೆಗೆ ಬದ್ಧರಾಗಿರಬೇಕು ಎಂದು ರಾಜ್ಯದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕರೆ ನೀಡಿದರು.ರಾಜ್ಯದ ಉಪ ಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ ಅವರು ವರ್ಚುವಲ್ ಮೂಲಕ ಭಾಗವಹಿಸಿ ಮಾತನಾಡಿ,ರಾಜ್ಯದಲ್ಲಿ ಭೀಕರ ಬರಗಾಲ ಆವರಿಸಿದ್ದು, ಸಾರ್ವಜನಿಕರ ಹಾಗೂ ರೈತರ ಸಮಸ್ಯೆಗಳನ್ನು ಬಗೆಹರಿಸಲು ಅಧಿಕಾರಿಗಳು ತುರ್ತು ಪರಿಸ್ಥಿತಿಯ ಮಾದರಿಯಲ್ಲಿ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು. ಸರ್ಕಾರವು ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಲು ಮತ್ತು ನೇರ ಸಂವಾದಕ್ಕಾಗಿ ಆರಂಭಿಸಿರುವ 'ಪ್ರಜಾಸೇವೆ' ಇಲಾಖೆಯಲ್ಲಿ ಸರ್ಕಾರದ ಯೋಜನೆಗಳು ಹಾಗೂ ಪರಿಹಾರ ಕ್ರಮಗಳು ತಳಮಟ್ಟದ ಜನರಿಗೆ ತಲುಪಬೇಕು ಎಂಬ ಉದ್ದೇಶದಿಂದ ಜಾರಿಗೊಳಿಸಲಾಗಿದೆ ಎಂದು ಪ್ರತಿಪಾದಿಸಿದರು. 164 ತಾಲ್ಲೂಕುಗಳಲ್ಲಿ ಭೀಕರ ಅಭಾವ: ರಾಜ್ಯದ ಒಟ್ಟು 240 ತಾಲ್ಲೂಕುಗಳ ಪೈಕಿ 164 ತಾಲ್ಲೂಕುಗಳಲ್ಲಿ ತೀವ್ರ ಮಳೆ ಕೊರತೆಯಿಂದಾಗಿ ಬರಗಾಲ ಆವರಿಸಿದೆ. ರೈತರು ಬೆಳೆ ನಷ್ಟದಿಂದ ತೀವ್ರ ಸಂಕಷ್ಟದಲ್ಲಿದ್ದಾರೆ. ಬೋರ್‌ವೆಲ್‌ಗಳಲ್ಲಿ ಅಂತರ್ಜಲ ಮಟ್ಟ ಕುಸಿದಿದ್ದು, ಕುಡಿಯುವ ನೀರಿನ ಅಭಾವ ಹೆಚ್ಚಾಗಿದೆ. ಅಲ್ಲದೆ ನೆರೆ ರಾಜ್ಯಗಳಲ್ಲೂ ಬೆಳೆ ಇಲ್ಲದ ಕಾರಣ ಜಾನುವಾರುಗಳಿಗೆ ಮೇವಿನ ಕೊರತೆ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಕೆ.ಎಮ್.ಎಫ್ ಮೂಲಕ ತುಮಕೂರು ಸೇರಿದಂತೆ ವಿವಿಧೆಡೆ 1 ಲಕ್ಷ ಮೇವಿನ ಕಿಟ್‌ಗಳನ್ನು ವಿತರಿಸುವ ಪ್ರಕ್ರಿಯೆ ಆರಂಭಿಸಲಾಗಿದೆ ಎಂದು ತಿಳಿಸಿದರು. ವಿಬಿ ಜಿ ರಾಮ್ ಜಿ ಯೋಜನೆ ಮೂಲಕ ಉದ್ಯೋಗ: ಗ್ರಾಮೀಣ ಭಾಗದಿಂದ ಜನರು ಗುಳೆ ಹೋಗುವುದನ್ನು ತಡೆಯಲು ಉದ್ಯೋಗ ಖಾತರಿ ಕಾಮಗಾರಿಗಳಿಗೆ ವಿಬಿ ಜಿ ರಾಮ್ ಜಿ ಯೋಜನೆಯಡಿ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ರಾಜ್ಯದಲ್ಲಿ ಈಗಾಗಲೇ 51,000 ಮಾನವ ದಿನಗಳ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ. ಬೆಳೆ ವಿಮೆ ನೊಂದಣಿ ಸಮಯದಲ್ಲಿ ಆಸಕ್ತಿ ತೋರುವ ಇನ್ಶೂರೆನ್ಸ್ ಕಂಪನಿಗಳು, ರೈತರಿಗೆ ನಷ್ಟ ಪರಿಹಾರ ನೀಡುವಲ್ಲಿ ವಿಳಂಬ ಮಾಡುತ್ತಿರುವುದಕ್ಕೆ, ಈ ಬಗ್ಗೆ ಶೀಘ್ರವೇ ಪ್ರತ್ಯೇಕ ಸಭೆ ನಡೆಸಲಾಗುವುದು ಎಂದರು. 'ಭಾರತ್ ಜೋಡೋ' ಸಂಘಗಳ ರಚನೆ: ಗ್ರಾಮೀಣ ಭಾಗದಲ್ಲಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಭಾವೈಕ್ಯತೆಯನ್ನು ಮೂಡಿಸಲು ಪ್ರತಿಯೊಂದು ಪಂಚಾಯಿತಿಯಲ್ಲಿ 'ಭಾರತ್ ಜೋಡೋ' ಸಂಘಗಳನ್ನು ರಚಿಸಿ, ಪ್ರತಿ ಸಂಘಕ್ಕೆ ವರ್ಷಕ್ಕೆ ರೂ.10 ಲಕ್ಷ ಅನುದಾನ ನೀಡುವ ವಿನೂತನ ಯೋಜನೆಗೆ ಚಾಲನೆ ನೀಡಲಾಗುತ್ತಿದೆ. ಸೆಪ್ಟೆಂಬರ್ ತಿಂಗಳಲ್ಲಿ ಬರಗಾಲದ ತೀವ್ರತೆ ಇನ್ನಷ್ಟು ಹೆಚ್ಚಾಗಲಿದೆ ಎಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿರುವುದರಿಂದ, ಪ್ರತಿಯೊಬ್ಬ ಜಿಲ್ಲಾಧಿಕಾರಿ, ಸಿಇಒ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದು, ಸಾರ್ವಜನಿಕರ ಅಹವಾಲುಗಳನ್ನು ಆಲಿಸಬೇಕು ಎಂದು ಸೂಚನೆ ನೀಡಿದರು. ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಯವರು, ಉಪಮುಖ್ಯಮಂತ್ರಿಯವರು ರಾಜ್ಯದ ವಿವಿಧ ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸಂವಾದ ನಡೆಸಿ ಬರ ಪರಿಸ್ಥಿತಿ, ಬೆಳೆ ಹಾನಿ, ಕುಡಿಯುವ ನೀರಿನ ಸಮಸ್ಯೆ, ಮೇವಿನ ಲಭ್ಯತೆ ಕುರಿತ ಮಾಹಿತಿ ಪಡೆದುಕೊಂಡರು. ಗದಗ ಜಿಲ್ಲೆಗೆ ಸಂಬಂಧಿಸಿದಂತೆ ಜಂಟಿ ಕೃಷಿ ಇಲಾಖೆ ನಿರ್ದೇಶಕಿ ಶ್ರೀಮತಿ ಚೇತನಾ ಪಾಟೀಲ ಅವರು ಮಾತನಾಡಿ, ಸಂಪುಟ ದರ್ಜೆ ಸಚಿವರಾದ ಬಸವರಾಜ ರಾಯರೆಡ್ಡಿ ಅವರು ಅಗಸ್ಟ್ 7 ರಿಂದ 9 ರವರೆಗೆ ಜಿಲ್ಲೆಯ ಎಲ್ಲ ತಾಲೂಕುಗಳ ರೈತರ ಜಮೀನುಗಳಿಗೆ ಭೇಟಿ ನೀಡಿ ಅಲ್ಲಿನ ಬರ ಪರಿಸ್ಥಿತಿ ಹಾಗೂ ಬೆಳೆ ಹಾನಿ ಅವಲೋಕನ ಮಾಡಿದ್ದಾರೆ. ಕರ್ನಾಟಕ ರೈತ ಸುರಕ್ಷಾ ಪಿಎಂಎಫ್‌ಬಿವೈ ಯೋಜನೆಯಡಿ ಕೃಷಿ ಬೆಳೆಗಳಿಗೆ 139653 ರೈತರು ಹಾಗೂ ತೋಟಗಾರಿಕೆ ಬೆಳೆಗಳಿಗೆ 12696 ರೈತರು ಒಟ್ಟಾರೆ 152349 ರೈತರು ತಮ್ಮ ಹೆಸರು ನೊಂದಾಯಿಸಿಕೊಂಡಿರುತ್ತಾರೆ. ಜಿಲ್ಲೆಯಲ್ಲಿ ಈವರೆಗೆ ಕೃಷಿ ಹಾಗೂ ತೋಟಗಾರಿಕೆ ಬೆಳೆಗಳ ಹಾನಿಯ ಮೊತ್ತ 164 ಕೋಟಿ ರೂ. ಎಂದು ಅಂದಾಜಿಸಲಾಗಿದೆ ಎಂದು ಸಭೆಗೆ ಮಾಹಿತಿ ಒದಗಿಸಿದರು. ಈ ವೇಳೆ ಸಚಿವರಾದ ಪ್ರಿಯಾಂಕ್ ಖರ್ಗೆ, ಲಕ್ಷ್ಮಣ ಸವದಿ, ಸಂತೋಷ್ ಎಸ್. ಲಾಡ್, ಅಜಯ್ ಸಿಂಗ್, ವಿಜಯಾನಂದ ಕಾಶಪ್ಪನವರ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಸೇರಿದಂತೆ ವಿವಿಧ ಇಲಾಖೆಗಳ ಕಾರ್ಯದರ್ಶಿಗಳು, ಸಚಿವಾಲಯದ ಹಿರಿಯ ಅಧಿಕಾರಿಗಳು, ಹಾಗೂ ಉನ್ನತಾಧಿಕಾರಿಗಳು ಉಪಸ್ಥಿತರಿದ್ದರು. ಜಿಲ್ಲಾ ಮಟ್ಟದಿಂದ ಗದಗ ಜಿಲ್ಲಾಡಳಿತದಲ್ಲಿ ವಿಡಿಯೋ ಸಂವಾದದ ಮೂಲಕ ಜಿಲ್ಲಾಧಿಕಾರಿ ಹಾಗೂ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸಿ ಎನ್ ಶ್ರೀಧರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂತೋಷ ಕುಮಾರ, ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ ಆರ್, ಎಸಿ ಗಂಗಪ್ಪ, ಜಿ ಪಂ ಉಪಕಾರ್ಯದರ್ಶಿ ಸಿ ಆರ್ ಮುಂಡರಗಿ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿ- ಸಿಬ್ಬಂದಿ ಉಪಸ್ಥಿತರಿದ್ದರು.

1ನೇ ಪುಟದಿಂದ....

ಶಿಷ್ಟಾಚಾರಕ್ಕೆ ಆದ್ಯತೆ, ಅಚ್ಚುಕಟ್ಟಾದ ವೇದಿಕೆ ಆಕರ್ಷಕ ಪಥಸಂಚಲನಕ್ಕೆ ಸಿದ್ಧತೆ ಶಾಲಾ ಮಕ್ಕಳ ಸುರಕ್ಷಿತ ಆಗಮನ ಮರಳುವಿಕೆ ಕುರಿತು ವಿಶೇಷ ಚರ್ಚೆ

## ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸ್ವಾತಂತ್ರ್ಯೋತ್ಸವದ ಪೂರ್ವಸಿದ್ಧತಾ ಸಭೆ

ಸಂದೇಶವನ್ನುಸಿದ್ಧಪಡಿಸುವಕುರಿತುಸಹಸಭೆಯಲ್ಲಿಚರ್ಚೆನಡೆಯಿತು. ಜಿಲ್ಲೆಯ ಅಭಿವೃದ್ಧಿ, ಸರ್ಕಾರದ ಜನಪರ ಯೋಜನೆಗಳು, ಸ್ವಾತಂತ್ರ್ಯ ಹೋರಾಟದ ಮೌಲ್ಯಗಳು, ರಾಷ್ಟ್ರೀಯ ಏಕತೆ ಹಾಗೂ ದೇಶಭಕ್ತಿಯ ಸಂದೇಶವನ್ನು ಒಳಗೊಂಡಂತೆ ಸಂದೇಶವನ್ನು ಸಿದ್ಧಪಡಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಅಗತ್ಯ ಸೂಚನೆ ನೀಡಲಾಯಿತು. ಸ್ವಾತಂತ್ರ್ಯೋತ್ಸವ ಆಚರಣೆಯ ಎಲ್ಲ ಸಿದ್ಧತೆಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಬೇಕು. ಪ್ರತಿಯೊಂದು ಇಲಾಖೆಯೂ ತಮಗೆ ವಹಿಸಲಾದ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಿ, ಪರಸ್ಪರ ಸಮನ್ವಯದೊಂದಿಗೆ ಕಾರ್ಯನಿರ್ವಹಿಸುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದರು.ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ.ಆರ್., ಸಹಾಯಕ ಆಯುಕ್ತ ಗಂಗಪ್ಪ ಎಂ. ಸೇರಿದಂತೆ ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಜನಶ್ರೀ ಟೈಮ್ಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಪ್ರಧಾನಿ ಮೋದಿ ಇಮೇಜ್ ಹಾಳಾಗಿದೆ ; ರಾಹುಲ್ ಗಾಂಧಿ ವಾಗ್ದಾಳಿ





ನವದೆಹಲಿ: ವಿದ್ಯಾರ್ಥಿ ಪ್ರತಿಭಟನಾಕಾರರ ವಿರುದ್ಧ ಪೊಲೀಸರು ದೌರ್ಜನ್ಯ ನಡೆಸಿರುವ ಆರೋಪ ಕುರಿತಂತೆ ಕೇಂದ್ರ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿರುವ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಗೃಹ ಸಚಿವ ಅಮಿತ್ ಶಾ ಅವರ ರಾಜೀನಾಮೆ ನೀಡಬೇಕು ಹಾಗೂ ಈ ಘಟನೆಯಿಂದಾಗಿ ಪ್ರಧಾನಿ ನರೇಂದ್ರ ಮೋದಿ ಅವರ ಇಮೇಜ್ ಹಾಳಾಗಿದೆ ಅದನ್ನು ಮತ್ತೆ ತರಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

ಭಾರತದ ಯುವಕರು ಪ್ರಧಾನಿ ಮತ್ತು ಗೃಹ ಸಚಿವರು ಅಥವಾ ಯಾವುದೇ ಅಧಿಕಾರಿಯನ್ನು ಅವರ ಕ್ರಿಯೆಗಳ ಪರಿಣಾಮಗಳಿಂದ ತಪ್ಪಿಸಿಕೊಳ್ಳಲು ಬಿಡುವುದಿಲ್ಲ ಎಂದು ಮಾಜಿ ಕಾಂಗ್ರೆಸ್ ಅಧ್ಯಕ್ಷರು ಹೇಳಿದರು. ಟಜುಲೈ 20 ರಂದು, ಭಾರತದ ಯುವಜನರು ನ್ಯಾಯಯುತ ಶಿಕ್ಷಣ ವ್ಯವಸ್ಥೆ ಮತ್ತು ಕಾಗದದ ಸೋರಿಕೆಗೆ ಹೊಣೆಗಾರಿಕೆಯನ್ನು ಒತ್ತಾಯಿಸಲು ಒಗ್ಗೂಡಿದರು. ಈ ಯುವಕ ಯುವತಿಯರು ಪ್ರತಿಯೊಂದು ಜಾತಿ, ವರ್ಗ, ಪ್ರದೇಶ ಮತ್ತು ಧರ್ಮದಿಂದ ಬಂದವರು ಎಂದು ಅವರು ಹೇಳಿದರು.

ಅವರು ನ್ಯಾಯವನ್ನು ಕೇಳುವಷ್ಟು ಧೈರ್ಯಶಾಲಿಗಳು, ತಮ್ಮ ಸಾಂವಿಧಾನಿಕ ಹಕ್ಕುಗಳನ್ನು ತಿಳಿದುಕೊಳ್ಳುವಷ್ಟು ಬುದ್ಧಿವಂತರು, ತಮ್ಮದೇ ಆದ ಪ್ರಕ್ಷುಬ್ಧತೆಯನ್ನು ನೋಡಿ ನಗುವಷ್ಟು ಕೋಮಲ, ಮತ್ತು ಅವರು ಹೋರಾಡಿ ಗೆಲ್ಲಬಹುದು ಎಂದು ನಂಬುವಷ್ಟು ಶ್ರದ್ಧೆ ಹೊಂದಿದ್ದಾರೆ ಎಂದು ಕಾಂಗ್ರೆಸ್ ನಾಯಕ ಹೇಳಿದರು. ಟರಾಷ್ಟ್ರವು ಪ್ರತಿಭಟನಾಕಾರರನ್ನು ವಿಸಯದಿಂದ ವೀಕ್ಷಿಸಿತು, ಅವರು ಹಾಡಿದರು, ನೃತ್ಯ ಮಾಡಿದರು, ನಗುತ್ತಿದ್ದರು, ಕೈಗಳನ್ನು ಹಿಡಿದು ಒಟ್ಟಿಗೆ ನಿಂತರು ಎಂದು ಅವರು ಹೇಳಿದರು. ಅವರ ಪ್ರತಿರೋಧವು ಅವರ ಸ್ವಂತ ಪೀಳಿಗೆಯ ನೋವಿಗೆ ಧ್ವನಿ ನೀಡಿತು ಮತ್ತು ಭಯದಿಂದ ಬಳಲುತ್ತಿರುವ ಆದರೆ ಮೌನವಾಗಿರುವ ಕೋಟಿಗಟ್ಟಲೆ ಭಾರತೀಯರ ನೋವಿಗೆ ಧ್ವನಿ ನೀಡಿತು ಎಂದು ಅವರು ಹೇಳಿದರು.

ಪ್ರತಿಭಟನೆಗಳು ಭಾರತದ ಹೆಮ್ಮೆಯ ಶಾಂತಿಯುತ ಪ್ರತಿರೋಧದ ಪರಂಪರೆಯನ್ನು ಮುನ್ನಡೆಸಿದವು ಎಂದು ಗಾಂಧಿ ಒತ್ತಿ ಹೇಳಿದರು, ಇದು ಸ್ವಾತಂತ್ರ್ಯವನ್ನು ಗೆದ್ದುಕೊಂಡ ಸಂಪ್ರದಾಯ ಮತ್ತು ಸಂವಿಧಾನದ 19 ನೇ ವಿಧಿಯಿಂದ ರಕ್ಷಿಸಲ್ಪಟ್ಟಿದೆ. ಆದರೂ, ಸರ್ಕಾರವು ಯುವಕರ ಧ್ವನಿಯನ್ನು ಕ್ರೂರವಾಗಿ ಹೊಡೆದುರುಳಿಸಲು ಪ್ರಯತ್ನಿಸಿತು. ಅವರ ಮೇಲೆ ಅಶ್ರುವಾಯು ಶೆಲ್‌ಗಳಿಂದ ದಾಳಿ ಮಾಡಲಾಯಿತು, ಮೊಳೆಯಿಂದ ಚುಚ್ಚಿದ ಲಾಠಿಗಳಿಂದ ಹೊಡೆದು ಪೆಲೆಟ್ ಗನ್‌ಗಳಿಂದ ಗುಂಡು ಹಾರಿಸಲಾಯಿತು, ಎಂದು ಅವರು ಹೇಳಿದರು.

ಗಾಂಧಿ ಅವರು ಮೊದಲು ಭೇಟಿಯಾದ 19 ವರ್ಷದ ಸಾಹಿಲ್ ಲೋಚಬ್ ಅವರ ಉದಾಹರಣೆಯನ್ನು ಉಲ್ಲೇಖಿಸಿದರು, ಅವರ ದೇಹದಾದ್ಯಂತ ನೂರಾರು ಸೀಸದ ಗುಳಿಗೆಗಳು ತುಂಬಿವೆ ಎಂದು ಹೇಳಿದರು. ಒಂದು ಪೆಲೆಟ್ ಅವನ ಕಣ್ಣಿಗೆ ಬಡಿದಿದೆ, ಬಹುಶಃ ಅವನನ್ನು ಕುರುಡನನ್ನಾಗಿ ಮಾಡಿತು. ಲಾಠಿ ಬೀಸುವ ಪೊಲೀಸರು ಯುವತಿಯರ ಮೇಲೆ ಕ್ರೂರವಾಗಿ ಹಲ್ಲೆ ನಡೆಸಿದರು, ಅವರ ಖಾಸಗಿ ಭಾಗಗಳಲ್ಲಿ ಹಲವರಿಗೆ ಗಾಯವಾಯಿತು. ಅಪ್ರಾಪ್ತ ವಯಸ್ಕರಿಗೆ ಲಾಠಿಯಿಂದ ಥಳಿಸಲಾಯಿತು, ಅವರ ಮೂಳೆಗಳು ಮುರಿದವು, ಅವರ ದೇಹದ ಮೇಲೆ ಗಾಯಗಳು ಮತ್ತು ಮೂಗೇಟುಗಳು ಎಂದು ಅವರು ಹೇಳಿದರು.

# ಬಿಡದಿ ಟೌನ್‌ಶಿಪ್‌ಗೆ ಅವಕಾಶ ಕೊಡಲ್ಲ : ಪಾದಯಾತ್ರೆಯಲ್ಲಿ ದೇವೇಗೌಡರ ಗುಡುಗು



ಬಿಡದಿ: ರೈತರ ಹೊಟ್ಟೆ ಮೇಲೆ ಹೊಡೆದು, ಜಮೀನು ಕಬಳಿಸಲು ಯಾವುದೇ ಕಾರಣಕ್ಕೂ ಬಿಡುವುದಿಲ್ಲ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಇಂದಿಲ್ಲಿ ರಾಜ್ಯ ಸರ್ಕಾರದ ವಿರುದ್ಧ ಗುಡುಗಿದ್ದಾರೆ. ಬಿಡದಿ ಟೌನ್‌ಶಿಪ್ ವಿರೋಧಿಸಿ ಜೆಡಿ-ಎಸ್ ನಡೆಸುತ್ತಿರುವ ಎರಡನೇ ದಿನದ ಪಾದಯಾತ್ರೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನೀವು ರಾಜ್ಯ ಆಳುತ್ತಿದ್ದೀರಿ ಅದಕ್ಕೆ ನಮ ಯಾವುದೇ ವಿರೋಧವಿಲ್ಲ. ಆದರೆ ರೈತರನ್ನು ಬೀದಿಗೆ ತಳ್ಳುವುದು, ಅವರ ಹೊಟ್ಟೆ ಮೇಲೆ ಹೊಡೆದು ಇಲ್ಲಿ ಲೇಔಟ್‌ಗಳನ್ನು ಮಾಡುತ್ತೇವೆ ಎಂದು ಹೇಳುತ್ತಿದ್ದೀರಲ್ಲಾ, ನಿಮಗೆ ಯಾರು ನಿವೇಶನ ಬೇಕು ಎಂದು ಅರ್ಜಿ ಕೊಟ್ಟಿದ್ದಾರೆ? ಎಂದು ಪ್ರಶ್ನಿಸಿದರು.

ನೀವು ಮುಖ್ಯಮಂತ್ರಿಯಾಗಲು ದೆಹಲಿಗೆ ಹೋಗಿ ಯಾರ ಜೊತೆ ಚರ್ಚೆ ಮಾಡಿದ್ದೀರಿ, ಯಾವ ಸಹಾಯ ಮಾಡುತ್ತೇನೆ ಎಂದು ಮಾತು ಕೊಟ್ಟು ಬಂದಿದ್ದೀರಿ ಅದನ್ನು ಬಹಿರಂಗಪಡಿಸಿ ಎಂದು ಸಿಎಂ ಡಿ.ಕೆ.ಶಿವಕುಮಾರ್‌ರವರಿಗೆ ಸವಾಲು ಹಾಕಿದರು.

ಸುಮಾರು 7,481 ಎಕರೆ ರೈತರ ಜಮೀನನ್ನು ಕಬಳಿಸುತ್ತಿರುವ ಹುನ್ನಾರದ ಹಿಂದೆ ಹಲವಾರು ಯೋಜನೆಗಳಿವೆ. ನೀವು ನಿನ್ನೆ ದೆಹಲಿಗೆ ಹೊರಡುವ ಮುನ್ನ ಯಾರಿಗೂ ಬಲವಂತ ಮಾಡುವುದಿಲ್ಲ ಮತ್ತು ಜಮೀನನ್ನು ಬಲವಂತವಾಗಿ ವಶಪಡಿಸಿಕೊಳ್ಳುವುದಿಲ್ಲ ಎಂದು ಹೇಳಿದ್ದೀರಿ. ಅದರಂತೆ ನಡೆದುಕೊಳ್ಳಿ. ನಿಮಗೆ ಕೈ ಮುಗಿದು ಕೇಳಿಕೊಳ್ಳುತ್ತೇನೆ. ಅರ್ಧ ಎಕರೆ ಇರಲಿ, ಒಂದು ಎಕರೆ ಇರಲಿ, 20 ಗುಂಟೆ ಜಾಗ ಇರಲಿ ಅವರು ಬದುಕು ಕಟ್ಟಿಕೊಳ್ಳುತ್ತಾರೆ. ನೀವು ಅವರನ್ನು ಬೀದಿಗೆ ದೂಡಬೇಡಿ ಎಂದು ಒತ್ತಾಯಿಸಿದರು.

ರೈತರ ಹೊಟ್ಟೆ ಮೇಲೆ ಹೊಡೆಯುವಂತಹ ಯಾವುದೇ ಯೋಜನೆಯನ್ನು ನಾನು ಖಂಡಿಸುತ್ತೇನೆ ಮತ್ತು ನನ್ನ ದೇಹಕ್ಕೆ ವಯಸ್ಸಾಗಿರಬಹುದು. ಆದರೆ ನನ್ನ ಬುದ್ಧಿಗೆ ವಯಸ್ಸಾಗಿಲ್ಲ. ಹೋರಾಟಕ್ಕೆ ನಾನು ಸದಾ ಸಿದ್ಧನಿದ್ದೇನೆ ಎಂದು ಹೇಳಿದರು. ಯಾರೂ ಕೂಡಾ ಧೃತಿಗೆಡಬಾರದು, ಎದೆಗುಂದಬಾರದು. ಈ ಹೋರಾಟ ರೈತರನ್ನು ಉಳಿಸುವ ಹೋರಾಟ. ಯಾವುದೇ ಕಾರಣಕ್ಕೂ ಬಿಡದಿ ಟೌನ್‌ಶಿಪ್‌ಗೆ ಅವಕಾಶ ನೀಡುವುದಿಲ್ಲ ಎಂದರು. ರೈತರ ಹೋರಾಟಕ್ಕೆ ನಾವು ಸದಾ ಸಿದ್ಧವಿದ್ದು, ಇದಕ್ಕೆ ಕುಮಾರಸ್ವಾಮಿ, ನಿಖಿಲ್‌ಕುಮಾರಸ್ವಾಮಿ ಸೇರಿದಂತೆ ನಮ ಅನೇಕ ಶಾಸಕರು, ಕಾರ್ಯಕರ್ತರು ಜೊತೆಗಿರುತ್ತಾರೆ ಎಂದು ಹೇಳಿದರು.

ಒಕ್ಕಲಿಗರು ಮುಖ್ಯಮಂತ್ರಿಯಾದರೆ ಸಹಿಸುವುದಿಲ್ಲ, ಹೊಟ್ಟೆ ಉರಿ ಎಂದು ಹೇಳುತ್ತೀರ. ನಿಮಗೆ ಇನ್ನೂ ಒಂದೂವರೆ ವರ್ಷ ಅಧಿಕಾರ ಅವಧಿ ಇದೆ. ಒಳ್ಳೆಯ ಕೆಲಸ ಮಾಡಿ. ಅದಕ್ಕೆ ನಮ ಸಹಕಾರವಿರುತ್ತದೆ. ಆದರೆ ನೂರಾರು ರೈತರ ಜಮೀನನ್ನು ಕಬಳಿಸುತ್ತಿದ್ದೀರಲ್ಲಾ ಅದಕ್ಕೆ ನಮ ಹೊಟ್ಟೆ ಉರಿಯುತ್ತಿದೆ ಎಂದು ಲೇವಡಿ ಮಾಡಿದರು. ಇದೇ ವೇಳೆ ಯುವಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮಾತನಾಡಿ, ಡಿ.ಕೆ.ಶಿವಕುಮಾರ್‌ರವರು ಪ್ರತಿ ಎಕರೆಗೆ 3 ಕೋಟಿ ರೂ. ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ನೀವು 2 ಕೋಟಿ ರೂ. ಕೊಡಿ. ಅದಕ್ಕೆ ಬೇಕಾಗುವ 11.50 ಸಾವಿರ ಕೋಟಿ ಪ್ರಾಧಿಕಾರದ ಬಳಿ ಇದೆಯೇ ಎಂಬುದನ್ನು ತೋರಿಸಿ ಎಂದು ಟೀಕಿಸಿದರು. ಟಈಗಾಗಲೇ ಬಿಡಿಎ, ಬಿಎಂಆರ್‌ಡಿಎ ಸೇರಿದಂತೆ ಹಲವಾರು ಸಂಸ್ಥೆಗಳ ಮೂಲಕ ಖಾಲಿ ನಿವೇಶನಗಳನ್ನು ಮಾರಾಟ ಮಾಡುವ ಜಾಹೀರಾತುಗಳನ್ನು ನೀಡಿ ಹಣ ಶೇಖರಣೆಗೆ ಮುಂದಾಗುತ್ತಿದ್ದೀರಿ. ಬಿಡದಿ ಟೌನ್‌ಶಿಪ್ ಹೆಸರಿನಲ್ಲಿ ರಿಯಲ್ ಎಸ್ಟೇಟ್ ದಂಧೆ ಮಾಡಿ ನಿಮ ಜೇಬು ತುಂಬಿಸಿಕೊಳ್ಳಲು ಯತ್ನಿಸುತ್ತಿದ್ದೀರಿ ಎಂದು ಆರೋಪಿಸಿದರು.

ಕನಕಪುರ ರೈತರಿಗೆ ಜಮೀನು ಮಾರಬೇಡಿ ಎನ್ನುತ್ತೀರ. ಆದರೆ ಇಲ್ಲಿ ನೀವು ರೈತರ ಜಮೀನನ್ನು ಕಬಳಿಸುತ್ತಿದ್ದೀರ. ಫ್ರೀಡಂ ಪಾರ್ಕ್‌ವರೆಗೂ ನಾವು ಹೋರಾಟ ನಡೆಸಲು ಮುಂದಾಗಿರುವಾಗ ಅದನ್ನು ತಡೆಯಲು ನೀವು ಯತ್ನಿಸುತ್ತಿದ್ದೀರ ಎಂದು ನೇರ ಆರೋಪ ಮಾಡಿದರು. ಪಾದಯಾತ್ರೆಯಲ್ಲಿ ಮಾಜಿ ಸಚಿವ ಪುಟ್ಟರಾಜು, ಹರೀಶ್‌ಗೌಡ, ಶರಣಗೌಡ ಕುಂದಪುರ, ಎ.ಮಂಜು, ಜೆಡಿ-ಎಸ್ ಜಿಲ್ಲಾಧ್ಯಕ್ಷ ಜಯಮುತ್ತು, ರಾಮನಗರ ತಾಲೂಕು ಅಧ್ಯಕ್ಷ ಶಿವಲಿಂಗಯ್ಯ, ಕರಿಯಮಾಜಿ, ರವಿಕುಮಾರ್, ಪೈಲ್ವಾನ್ ಪುಟ್ಟರಾಜು ಸೇರಿದಂತೆ ಹಲವಾರು ನಾಯಕರು, ಸಾವಿರಾರು ರೈತರು ಪಾಲ್ಗೊಂಡಿದ್ದರು.

# ಬೆಂಗಳೂರಿನಲ್ಲಿ ಐಷಾರಾಮಿ ಹೋಟೆಲ್‌ಗಳ ಕಿಚನ್ ಕರ್ಮಕಾಂಡ ಬಯಲಿಗೆ



ಬೆಂಗಳೂರು: ನಗರದಲ್ಲಿರುವ ಐಷಾರಾಮಿ ಹೋಟೆಲ್‌ಗಳ ಬಂಡವಾಳ ಬಯಲಾಗಿದೆ. ಮೇಲೆಲ್ಲಾ ಥಳಕು ಒಳಗೆಲ್ಲಾ ಹುಳುಕು ಅನ್ನೋ ಹಾಗೆ ಸ್ಟಾರ್ ಹೋಟೆಲ್‌ಗಳ ಕಿಚನ್‌ಗೆ ಹೋದಾಗ ಮಾತ್ರ ಅವರ ಹುಳುಕು ಬಯಲಾಗಿದೆ.ದುಬಾರಿ ಬೆಲೆಯ ಪ್ರತಿಷ್ಠಿತ ಹೋಟೆಲ್‌ಗಳ ಅಡುಗೆಮನೆಯಲ್ಲಿ ಅವಧಿ ಮೀರಿದ ಮಾಂಸ, ಮೀನು, ಹಾಲು-ಮೊಸರು ಹಾಗೂ ಕಳಪೆ ಆಹಾರ ಪದಾರ್ಥಗಳು ಪತ್ತೆಯಾಗಿರುವುದು ಅವರ ಕಾರ್ಯವೈಖರಿಗೆ ಹಿಡಿದ ಕೈಗನ್ನಡಿಯಂತಿದೆ.

ವೀಕೆಂಡ್‌ನಲ್ಲಿ ಜನಜಂಗುಳಿ ಹೆಚ್ಚಿರುವ ಸಂದರ್ಭದಲ್ಲೇ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಅಧಿಕಾರಿಗಳು ನಗರದ ಪ್ರತಿಷ್ಠಿತ ಹೋಟೆಲ್, ಪಬ್ ಮತ್ತು ರೆಸ್ಟೋರೆಂಟ್‌ಗಳ ಮೇಲೆ ದಿಢೀರ್ ಮೆಗಾ ದಾಳಿ ನಡೆಸಿದ್ದಾರೆ. ಯುಬಿ ಸಿಟಿ, ಬ್ರಿಗೇಡ್ ರೋಡ್, ಎಂಜಿ ರೋಡ್ ಹಾಗೂ ಇಂದಿರಾನಗರ ಸೇರಿದಂತೆ ಹಲವೆಡೆ ಏಕಕಾಲಕ್ಕೆ ತಪಾಸಣೆ ನಡೆದಿದೆ.ಆಹಾರ ಸುರಕ್ಷತಾ ಪ್ರಾಧಿಕಾರದ ಆಯುಕ್ತ ಶ್ರೀನಿವಾಸ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ 10ಕ್ಕೂಹೆಚ್ಚುಪಬ್‌ಹಾಗೂರೆಸ್ಟೋರೆಂಟ್‌ಗಳನ್ನು ಪರಿಶೀಲಿಸಲಾಗಿದೆ. ಟಆಹಾರ ತಯಾರಿಸುವ ವಿಧಾನ, ಅಡುಗೆಮನೆಯ ಶುಚಿತ್ವ, ಆಹಾರ ಪದಾರ್ಥಗಳ ಗುಣಮಟ್ಟ, ಸಂಗ್ರಹಣೆ ಹಾಗೂ ಎಕ್ಸ್ ಪೈರಿ ದಿನಾಂಕಗಳನ್ನು ಅಧಿಕಾರಿಗಳು ಪರಿಶೀಲಿಸಿದ್ದಾರೆ.ಅವಧಿ ಮೀರಿದ ಮಾಂಸ, ಮೀನು ಪತ್ತೆದಾಳಿ ವೇಳೆ ಕೆಲವು ಹೋಟೆಲ್‌ಗಳಲ್ಲಿ ಚಿಕನ್, ಮಟನ್ ಮತ್ತು ಮೀನುಗಳನ್ನು ನಿಯಮಾನುಸಾರ ಫ್ರೀಜ್ ಮಾಡದೇ ಸಂಗ್ರಹಿಸಿರುವುದು ಪತ್ತೆಯಾಗಿದೆ.

18 ಡಿಗ್ರಿ ಸೆಲ್ಸಿಯಸ್‌ನಲ್ಲಿ ಚಿಕನ್ ಮತ್ತು ಮಟನ್ ಅನ್ನು ಗರಿಷ್ಠ ಒಂದು ವರ್ಷದವರೆಗೆ ಸಂಗ್ರಹಿಸಬಹುದು. ಆದರೆ ಮೀನುಗಳ ಸಂಗ್ರಹಣೆಗೆ ಸಾಮಾನ್ಯವಾಗಿ ಕಡಿಮೆ ಅವಧಿಯ ಮಿತಿ ಇದೆ. ಆದರೂ ಕೆಲ ಪಬ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ದೀರ್ಘಕಾಲದಿಂದ ಮಾಂಸ ಹಾಗೂ ಮೀನು ಸಂಗ್ರಹಿಸಿರುವುದು ಪತ್ತೆಯಾಗಿದೆ. ಕೆಲವೆಡೆ ಆಹಾರ ಪದಾರ್ಥಗಳ ಪ್ಯಾಕೆಟ್‌ಗಳ ಮೇಲಿನ ದಿನಾಂಕವನ್ನೇ ಬದಲಿಸಿ ಹೊಸ ಸ್ಟಿಕ್ಕರ್ ಅಂಟಿಸಿರುವುದು ಕೂಡ ಅಧಿಕಾರಿಗಳ ಗಮನಕ್ಕೆ ಬಂದಿದೆ.ರಾಯಲ್ ಚೈನ್‌ನಲ್ಲಿ ಸುಮಾರು 50 ಕೆಜಿ ನಾನ್‌ವೆಜ್ ಪತ್ತೆಯಾಗಿದ್ದರೆ, ಟಸ್ಕಾನೊ ಸೇರಿದಂತೆ ಕೆಲವು ಕಡೆ ಅವಧಿ ಮೀರಿದ ತರಕಾರಿ ಹಾಗೂ ಡ್ರೈಫ್ರೂಟ್ಸ್ ಪತ್ತೆಯಾಗಿವೆ.

**ಸ್ಕೈ ಲಾಂಜ್‌ನಲ್ಲಿ 45 ಕೆಜಿ ಮಾಂಸ ವಶ;**

ಯುಬಿ ಸಿಟಿಯ 16ನೇ ಮಹಡಿಯಲ್ಲಿರುವ ಸ್ಕೈ ಲಾಂಜ್‌ನಲ್ಲಿ ಆಹಾರ ಸುರಕ್ಷತಾ ಅಧಿಕಾರಿಗಳಿಗೆ ಹೆಚ್ಚಿನ ಪ್ರಮಾಣದ ಕಳಪೆ ಆಹಾರ ಪದಾರ್ಥಗಳು ಸಿಕ್ಕಿವೆ.ಕಿಚನ್‌ನಲ್ಲಿ ಶುಚಿತ್ವದ ಕೊರತೆ ಜೊತೆಗೆ ಕೊಳೆತ ಮಾಂಸ, ಅವಧಿ ಮೀರಿದ ಹಾಲು ಮತ್ತು ಮೊಸರು ಪತ್ತೆಯಾಗಿದೆ. ಸುಮಾರು 10 ದಿನಗಳ ಹಿಂದೆಯೇ ಎಕ್?ಸ್ಪೈರ್ ಆಗಿದ್ದ ಹಾಲು-ಮೊಸರು ಕೂಡ ಪತ್ತೆಯಾಗಿದೆ. ಸ್ಕೈ ಲಾಂಜ್‌ನಿಂದ ಬರೋಬ್ಬರಿ 45 ಕೆಜಿ ಮಾಂಸ, 6 ಕೆಜಿ ತರಕಾರಿ ಹಾಗೂ ಬಳಕೆಯಾದ ಅಡುಗೆ ಎಣ್ಣೆ ಸೇರಿದಂತೆ ಆಹಾರ ಪದಾರ್ಥಗಳನ್ನು ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಕಳಪೆ ಆಹಾರ ಪದಾರ್ಥಗಳು ಪತ್ತೆಯಾದ ಹಿನ್ನೆಲೆಯಲ್ಲಿ ಕಿಚನ್‌ಗೆ ಬೀಗ ಹಾಕಿ, ವಶಪಡಿಸಿಕೊಂಡ ಆಹಾರವನ್ನು ಫ್ರೀಜ್ ಲಾಕ್ ಮಾಡಲು ಸೂಚಿಸಲಾಗಿದೆ.

**10-15 ಸ್ಯಾಂಪಲ್ ಸಂಗ್ರಹ;**

ಕಾರ್ಯಾಚರಣೆಯಲ್ಲಿ ಸುಮಾರು 10ರಿಂದ 15 ಆಹಾರ ಮಾದರಿಗಳನ್ನು ಸಂಗ್ರಹಿಸಲಾಗಿದೆ. ಈ ಸ್ಯಾಂಪಲ್‌ಗಳನ್ನು ಸರ್ಕಾರಿ ಹಾಗೂ ಖಾಸಗಿ ಪ್ರಯೋಗಾಲಯಗಳಲ್ಲಿ ಪರೀಕ್ಷೆಗೆ ಕಳುಹಿಸಲಾಗುತ್ತಿದೆ.ಅಧಿಕಾರಿಗಳ ಪ್ರಕಾರ, ಈಗಾಗಲೇ ನಗರದಾದ್ಯಂತ 59 ಹೋಟೆಲ್‌ಗಳನ್ನು ತಪಾಸಣೆ ಮಾಡಲಾಗಿದ್ದು, ನಿಯಮ ಉಲ್ಲಂಘನೆ ಕಂಡುಬಂದ ಹಿನ್ನೆಲೆಯಲ್ಲಿ ಸುಮಾರು 30 ಮಂದಿಗೆ ನೋಟಿಸ್ ನೀಡಲಾಗಿದೆ. ಯುಬಿ ಸಿಟಿ ವ್ಯಾಪ್ತಿಯಲ್ಲೇ ನಿನ್ನೆ ರಾತ್ರಿ 10 ಪಬ್ ಮತ್ತು ರೆಸ್ಟೋರೆಂಟ್‌ಗಳ ಮೇಲೆ ದಾಳಿ ನಡೆಸಲಾಗಿದ್ದು, ನಾಲ್ಕು ಪಬ್-ರೆಸ್ಟೋರೆಂಟ್‌ಗಳಿಗೆ ನೋಟಿಸ್ ನೀಡಲಾಗಿದೆ. ಟಸ್ಕಾನೊದಲ್ಲಿ ರಮ್ ಕೂಡ ವಶ; ಕೇಂದ್ರ ಸರ್ಕಾರದ ಸೂಚನೆಯ ಮೇರೆಗೆ ಟಸ್ಕಾನೊದಲ್ಲಿ ರಮ್‌ನ ಮೂರು ಬಾಟಲಿಗಳನ್ನು ಅಧಿಕಾರಿಗಳು ವಶಕ್ಕೆ ಪಡೆದುಕೊಂಡಿದ್ದಾರೆ. ವಶಪಡಿಸಿಕೊಂಡ ಎಲ್ಲಾ ಮಾದರಿಗಳನ್ನು ಪರೀಕ್ಷೆಗೆ ಕಳುಹಿಸಲಾಗುತ್ತಿದೆ ಎಂದು ಆಹಾರ ಸುರಕ್ಷತಾ ಪ್ರಾಧಿಕಾರ ತಿಳಿಸಿದೆ. ಹೋಟೆಲ್‌ಗಳಿಗೆ ಭಾರಿ ದಂಡದ ಎಚ್ಚರಿಕೆ:ಆಹಾರ ಸುರಕ್ಷತಾ ನಿಯಮ ಉಲ್ಲಂಘಿಸುವ ಹೋಟೆಲ್‌ಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಆಯುಕ್ತ ಶ್ರೀನಿವಾಸ್ ಎಚ್ಚರಿಸಿದ್ದಾರೆ. ಕೇಂದ್ರ ಸರ್ಕಾರದ ನಿಯಮಗಳ ಅನ್ವಯ 5 ಲಕ್ಷದವರೆಗೆ ದಂಡ ವಿಧಿಸುವ ಅಧಿಕಾರ ಇಲಾಖೆಗೆ ಇದೆ ಎಂದು ಅವರು ತಿಳಿಸಿದ್ದಾರೆ. ಹೋಟೆಲ್ ಮಾಲೀಕರಿಗೆ ಆಹಾರ ಸಂಗ್ರಹಣೆ ಹಾಗೂ ಸುರಕ್ಷತಾ ನಿಯಮಗಳ ಬಗ್ಗೆ ಸರಿಯಾದ ಅರಿವು ಇಲ್ಲದಿರುವುದು ಕಂಡುಬಂದಿದ್ದು, ಶೀಘ್ರದಲ್ಲೇ ಅಡ್ವೈಸರಿ ಹೊರಡಿಸಲಾಗುವುದು ಎಂದಿದ್ದಾರೆ.

ಇನ್ನು ಆನ್‌ಲೈನ್ ಮೂಲಕ ಸೆಂಟ್ರಲ್ ಕಿಚನ್‌ಗಳ ಪರಿಶೀಲನೆ ನಡೆಸಲು ಕೂಡ ಇಲಾಖೆ ಮುಂದಾಗಿದೆ.ದಾಳಿ ನಡೆಸದಂತೆ ಒತ್ತಡ ಬಂದಿದೆಯಾ?ಆಹಾರ ಇಲಾಖೆಯ ದಾಳಿ ತಡೆಯಲು ಯಾರಾದರೂ ಒತ್ತಡ ಹೇರಿದ್ದಾರಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿರುವ ಆಯುಕ್ತ ಶ್ರೀನಿವಾಸ್, ತಮಗೆ ಯಾವುದೇ ಒತ್ತಡ ಬಂದಿಲ್ಲ ಮತ್ತು ಯಾರೂ ಫೋನ್ ಮಾಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

"JANASHREE TIMES" Kannada daily morning Owner, Published by ANANDAYYA DANAYYA VIRAKTAMATH Address: 229/1, 3 RD CROSS VIVEKANAND NAGAR NEAR WATER TANK, GADAG, KARNATAKA - 582101. Printed at: SHIVANI PRINTERS Printers. Address: AT: HULKOTI T/D: GADAG OFFICE ADDERS: SHIVANI PRINTERS NEW COURT OPPSITE PLOT NO 28 RS NO 312/3B GARAG COMPLEX, GADAG, KARNATAKA - 582101. email: janashreetimes@gmail.com